ಸಂಪುಟ 01 | ಸಂಚಿಕೆ 142 | ಮಂಗಳವಾರ 28 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ಹೆಪಟೈಟಿಸ್ ದಿನ (World Hepatitis Day)
ಪ್ರತಿವರ್ಷ ಜುಲೈ 28ರಂದು ಆಚರಿಸಲಾಗುತ್ತದೆ. ಹೆಪಟೈಟಿಸ್ (ಯಕೃತ್ತಿನ ಉರಿಯೂತ) ಕುರಿತು ಜಾಗೃತಿ ಮೂಡಿಸುವುದು, ತಡೆಗಟ್ಟುವಿಕೆ, ಪರೀಕ್ಷೆ ಮತ್ತು ಚಿಕಿತ್ಸೆಯ ಮಹತ್ವವನ್ನು ತಿಳಿಸುವುದು ಈ ದಿನದ ಉದ್ದೇಶ.

2) ವಿಶ್ವ ಪ್ರಕೃತಿ ಸಂರಕ್ಷಣಾ ದಿನ (World Nature Conservation Day)
ಪ್ರಕೃತಿ ಸಂಪನ್ಮೂಲಗಳು, ಜೀವ ವೈವಿಧ್ಯತೆ ಮತ್ತು ಪರಿಸರವನ್ನು ಸಂರಕ್ಷಿಸುವ ಅಗತ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ದಿನ.

## ಸುಭಾಷಿತ

ನಮ್ಮ ಆಚಾರ ವಿಚಾರಗಳಿಂದ ಮಾತ್ರ
ನಾವು ಉತ್ತಮರು ಅಥವಾ ಅಧಮರು
ಎನಿಸಿಕೊಳ್ಳುತ್ತೇವೆಯೇ ವಿನಾ
ಜಾತಿಯಿಂದಲ್ಲ.

–ಬಸವಣ್ಣ

## ಮಳೆ, ಬೆಳೆ ಇಲ್ಲದ ಅಖಂಡ ಬಳ್ಳಾರಿ ಜಿಲ್ಲೆಯನ್ನು ಬರ ಪೀಡಿತ ಜಿಲ್ಲೆ ಎಂದು ಘೋಷಿಸಿ : ಬಡಿಗೇರ್ ವಿರೇಶ್ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆ ಕೈಕೊಟ್ಟ ಹಿನ್ನಲೆ ರೈತರು ಸಂಕಷ್ಟದಲ್ಲಿ ಜೀವನ ಸಾಗಿಸಬೇಕಾದ ಅನಿವಾರ್ಯತೆ ಉಂಟಾಗಿದ್ದು, ಕೂಡಲೇ ಹೊಸಪೇಟೆ ಜಿಲ್ಲೆ ಒಳಗೊಂಡಂತೆ ಅಖಂಡ ಬಳ್ಳಾರಿ ಜಿಲ್ಲೆಯನ್ನು ರಾಜ್ಯ ಸರ್ಕಾರ ಬರ ಪೀಡಿತ ಪ್ರದೇಶವೆಂದು ಘೋಷಿಸಿ, ಬರ ಪರಿಹಾರ ಕಲ್ಪಿಸಬೇಕೆಂದು ಕಂಪ್ಲಿ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿಯ ಕಂಪ್ಲಿ ಮಂಡಲದ ಯುವ ಮೋರ್ಚಾ ಅಧ್ಯಕ್ಷ ಬಡಿಗೇರ್ ವಿರೇಶ ಒತ್ತಾಯಿಸಿದರು.



ಅವರು ಪಟ್ಟಣದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿ, ಈ ಬಾರಿ ವಾಡಿಕೆಯಿಂದ ಮಳೆ ಸಂಪೂರ್ಣವಾಗಿ ಬಾರದೇ ಇರುವುದರಿಂದ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಇದರಿಂದ ಅನ್ನದಾತರ ಬದುಕು ಅತಂತ್ರದಲ್ಲಿ ಸಾಗುವಂತೆ ಮಾಡಿದೆ. ರೈತರ ಜೀವನಾಡಿ ತುಂಗಭದ್ರಾ ಜಲಾಶಯದಲ್ಲಿ ಈ ಬಾರಿ ನೀರು ಸಂಗ್ರಹದ ಪ್ರಮಾಣ ಕೆಳಮಟ್ಟದಲ್ಲಿರುವುದರಿಂದ ಮುಂಗಾರು ಬೆಳೆಗೆ ನೀರಿಲ್ಲದಿರವುದು ರೈತರಲ್ಲಿ ಆತಂಕ ದೃಷ್ಟಿಸಿದೆ. ಕಂಪ್ಲಿ , ಕುರುಗೋಡು ತಾಲೂಕು ಸೇರಿದಂತೆ ಹೋಸಪೇಟೆ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಮಳೆ, ಬೆಳೆ ಇಲ್ಲದೇ ಅನ್ನದಾತರು ಕಂಗಾಲಾಗಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಈ ಎರಡು ಜಿಲ್ಲೆಗಳನ್ನು ಬರ ಪೀಡಿತ ಜಿಲ್ಲೆಗಳೆಂದು ಘೋಷಿಸಿ, ಬರ ಪರಿಹಾರ ನೀಡುವ ಮೂಲಕ ರೈತರ ಬದುಕಿಗೆ ಆಸರೆಯಾಗಬೇಕು ಎಂದರು.

# KPSC ಅಕ್ರಮ : ಸಿಬಿಐ ತನಿಖೆಗೆ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇತ್ತೀಚೆಗೆ ನಡೆದಿರುವ ನೇಮಕಾತಿಯಲ್ಲಿ ಭಾರೀ ಅಕ್ರಮಗಳು ನಡೆದಿರುವ ಹಿನ್ನೆಲೆಯಲ್ಲಿ ರಾಜ್ಯಸರ್ಕಾರ ಕೂಡಲೇ ಸಿಬಿಐ ತನಿಖೆಗೆ ವಹಿಸಬೇಕೆಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ.**




ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪಶುವೈದ್ಯಾಧಿಕಾರಿ ನೇಮಕಾತಿ ಸೇರಿದಂತೆ ಕೆಪಿಎಸ್ಸಿಯಲ್ಲಿ ನಡೆದಿರುವ ಪ್ರತಿಯೊಂದೂ ನೇಮಕಾತಿಯಲ್ಲಿ ದೊಡ್ಡ ಹಗರಣವೇ ನಡೆದಿದೆ. ಇದರ ಸತ್ಯಾಸತ್ಯತೆ ಹೊರಬೇಕೆಂದರೆ ಸಿಬಿಐ ತನಿಖೆಯೇ ಸೂಕ್ತ ಎಂದು ಒತ್ತಾಯಿಸಿದರು. ಕೆಪಿಎಸ್ಸಿ ಹಗರಣ ದಿನದಿಂದ ದಿನಕ್ಕೆ ಹೊಸ ಸ್ವರೂಪ ಪಡೆಯುತ್ತಿದೆ. ಕಳೆದ ಬಾರಿ ನಾನೇ ವಿಧಾನಸಭೆಯಲ್ಲಿ ದಾಖಲೆಗಳ ಸಮೇತ ಇದರ ಬ್ರಹಾಂಡ ಭ್ರಷ್ಟಾಚಾರವನ್ನು ಬಯಲು ಮಾಡಿದ್ದೆ. ಪಶು ಇಲಾಖೆಯಲ್ಲಿ 400 ಹುದ್ದೆಗಳಿಗೆ 80 ಲಕ್ಷ ಹಣವನ್ನು ಕೇಳಿದ್ದಾರೆ. ಒಂದೊಂದು ಪೋಸ್ಟ್ಗೆ ಒಂದೊಂದು ಕೋಟಿ ರೂ. ನಿಗದಿ ಪಡಿಸಿದ್ದಾರೆ ಎಂದು ಆರೋಪಿಸಿದರು. ಐಎಎಸ್ ಅಧಿಕಾರಿ ಇದ್ದಾರೆ. ಅಲ್ಲಿ ಕೆಲಸ ಮಾಡಿಕೊಡುತ್ತಾರೆ ಎಂದು ಆಕಾಂಕ್ಷಿಗಳಿಗೆ ಮಧ್ಯವರ್ತಿಗಳು ಹೇಳಿದ್ದಾರೆ. ಇದು ಆಡಿಯೋದಲ್ಲಿ ಸಂಪೂರ್ಣವಾಗಿ ಬಹಿರಂಗವಾಗಿದೆ. ಹಾಗಾದರೆ ಐಎಎಸ್ ಅಧಿಕಾರಿ ಯಾರು? ಎಂದು ಪ್ರಶ್ನಿಸಿದರು.

ವಿಧಾನಸೌಧದಲ್ಲಿ ಇಬ್ಬರಿಗೆ ಕೆಲಸ ಕೊಡಿಸಿದ್ದೇನೆ ಎಂದು ಮಧ್ಯವರ್ತಿ ಹೇಳಿದ್ದಾರೆ. ಹೀಗಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ದೆಹಲಿಯಲ್ಲಿ ರಾಹುಲ್ಗಾಂಧಿ ನೀಟ್ ವಿರುದ್ಧ ಹೋರಾಟ ಮಾಡುತ್ತಾರೆ. ಅವರದೇ ಪಕ್ಷ ಆಡಳಿತವಿರುವ ಕರ್ನಾಟಕದಲ್ಲಿ ಇಷ್ಟೆಲ್ಲಾ ಕರ್ಮಕಾಂಡಗಳು ನಡೆದಿದ್ದರೂ ತುಟಿಯೇ ಬಿಚ್ಚುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

80 ಲಕ್ಷ ರೂ. ಕೊಟ್ಟರೆ ಹುದ್ದೆ ಕೊಡಿಸುವುದಾಗಿ ಆಡಿಯೋದಲ್ಲಿ ಬಹಿರಂಗಗೊಂಡಿದೆ. ನೀಟ್ ಬಗ್ಗೆ ಮಾತನಾಡುವ ರಾಹುಲ್ಗಾಂಧಿ ಕೆಪಿ–ಎಸ್ಸಿ ಬಗ್ಗೆಯೂ ಮಾತನಾಡಬೇಕಲ್ಲವೇ?, ಕೇಂದ್ರದಲ್ಲಿ ಕಾಂಗ್ರೆಸ್ ನಾಯಕರು ಪ್ರಶ್ನೆಪತ್ರಿಕೆ ಸೋರಿಕೆಯಾದರೆ ಸಚಿವರು ಹೊಣೆ ಎನ್ನುತ್ತಾರೆ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನೆಪತ್ರಿಕೆ ಸೋರಿಕೆಗೆ ಜಿಲ್ಲಾಧಿಕಾರಿಗಳು ಹೊಣೆ ಎನ್ನುತ್ತಾರೆ. ಈ ದ್ವಂದ್ವ ನೀತಿ ಏಕೆ? ಎಂದು ಪ್ರಶ್ನಿಸಿದರು.

ತಾವು ಹಾಗೂ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇಬ್ಬರೂ ಶೀಘ್ರದಲ್ಲೇ ಕೆಪಿಎಸ್ಸಿಗೆ ನೇರವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದೇವೆ.ವಿಧಾನಸಭೆ ಅಧಿವೇಶನದಲ್ಲಿ ಚರ್ಚೆ: ಮುಂಬರುವ ವಿಧಾನಸಭೆ ಅಧಿವೇಶನದಲ್ಲಿ ಈ ಹಗರಣವನ್ನು ಗಂಭೀರವಾಗಿ ಪ್ರಸ್ತಾಪಿಸಿ, ಸರ್ಕಾರದ ವಿರುದ್ಧ ಸಮರ ಸಾರಿ ಚಳಿ ಬಿಡಿಸಲಾಗುವುದು ಎಂದು ಆರ್. ಅಶೋಕ್ ಎಚ್ಚರಿಕೆ ನೀಡಿದ್ದಾರೆ.

ಕಳೆದ ಅಧಿವೇಶನದಲ್ಲೇ ಕೆಪಿಎಸ್ಸಿ ಭ್ರಷ್ಟಾಚಾರದ ಬಗ್ಗೆ ಧ್ವನಿ ಎತ್ತಿದ್ದೆ. ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ನನ್ನ ಮಾತು ಸತ್ಯ ಎಂದಿದ್ದರು. ಆದರೂ, ಪಶುವೈದ್ಯರ 400 ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ದೊಡ್ಡ ಮಟ್ಟದ ಅಕ್ರಮ ನಡೆದಿದೆ. ಹುದ್ದೆ ಕೊಡಿಸುವುದಾಗಿ ಹೇಳಿ ಏಜೆಂಟ್ ಒಬ್ಬ 80 ಲಕ್ಷ ರೂಪಾಯಿಗೆ ಬೇಡಿಕೆ ಇಟ್ಟಿರುವ ಆಡಿಯೋ ತನ್ನ ಬಳಿಯಿದೆ ಎಂದು ಅಶೋಕ್ ತಿಳಿಸಿದರು.

ಐಎಎಸ್ ಅಧಿಕಾರಿಯೊಬ್ಬರ ಮೂಲಕ ಕೆಲಸ ಮಾಡಿಸಿಕೊಡುವುದಾಗಿ ಹಾಗೂ ತನ್ನ ಮಕ್ಕಳಿಗೂ ಇದೇ ರೀತಿ ಕೆಲಸ ಕೊಡಿಸಿರುವುದಾಗಿ ಆ ವ್ಯಕ್ತಿ ಆಡಿಯೋದಲ್ಲಿ ಮಾತನಾಡಿದ್ದಾನೆ ಎಂದು ಗಂಭೀರ ಆರೋಪ ಮಾಡಿದರು.

ವಸೂಲಿ ಮಾಡುವ ಈ ಕೋಟ್ಯಂತರ ಹಣ ಯಾವ ಯಾವ ಸಚಿವರಿಗೆ ತಲುಪುತ್ತಿದೆ? ಹಂಗಾಮಿ ಅಧ್ಯಕ್ಷರಿಂದ ಆಂತರಿಕ ತನಿಖೆ ನಡೆಸಿದರೆ ಸತ್ಯ ಹೊರಬರಲು ಸಾಧ್ಯವಿಲ್ಲ. ಇದರ ಹಿಂದೆ ಸರ್ಕಾರವೇ ಭಾಗಿಯಾಗಿರುವ ಅನುಮಾನವಿದೆ ಎಂದು ಅವರು ಕಿಡಿಕಾರಿದರು. ರಾಷ್ಟ್ರಮಟ್ಟದಲ್ಲಿ ನೀಟ್ (ಫೆಉಉ) ಪರೀಕ್ಷೆ ಬಗ್ಗೆ ರಾಹುಲ್ ಗಾಂಧಿ ನಿರಂತರವಾಗಿ ಹೋರಾಟ ಮಾಡುತ್ತಾರೆ. ಆದರೆ ಈಗ ತಮ್ಮದೇ ಪಕ್ಷ ಅಧಿಕಾರದಲ್ಲಿರುವ ಕರ್ನಾಟಕದಲ್ಲಿ ಕೆಪಿಎಸ್ಸಿ ಹಗರಣದ ಬಗ್ಗೆ ಅವರು ಏಕೆ ಮೌನವಾಗಿದ್ದಾರೆ? ಪ್ರಿಯಾಂಕಾ ಗಾಂಧಿ, ಸೋನಿಯಾ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರು ಈ ವಿಷಯದಲ್ಲಿ ಬಾಯಿ ಬಿಡಬೇಕು ಎಂದು ಒತ್ತಾಯಿಸಿದರು. ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಯಾವುದೇ ಪರೀಕ್ಷೆಯಲ್ಲಿ ಅಕ್ರಮ ನಡೆದರೆ ಜಿಲ್ಲಾಧಿಕಾರಿಗಳೇ ಹೊಣೆ ಎಂದಿದ್ದಾರೆ. ನೀಟ್ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಲೀಕ್ ಆದರೆ ಮಂತ್ರಿಗಳೇ ಹೊಣೆ ಎನ್ನುವ ಕಾಂಗ್ರೆಸ್ ನಾಯಕರು, ರಾಜ್ಯದಲ್ಲಿ ಬಂದಾಗ ಮಾತ್ರ ಡಿಸಿಗಳ ಮೇಲೆ ಜವಾಬ್ದಾರಿ ಹಾಕಿ ನುಣುಚಿಕೊಳ್ಳುತ್ತಿದ್ದಾರೆ. ಇದು ಅವರ ಟಿಡಬಲ್ ಸ್ಟಾಂಡರ್ಡ್ಟ ನೀತಿಯನ್ನು ತೋರಿಸುತ್ತದೆ ಎಂದು ಟೀಕಿಸಿದರು.

## ಆ.5 ರಂದು ಬರಕೋಲ್ ಚಳುವಳಿ ಹಾಗೂ ಮಾನ್ವಿ ಬಂದ್: ಹೊಳೆಯಪ್ಪ ಉಟಕನೂರು

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಘಟಕದ ಅಧ್ಯಕ್ಷರಾದ ಹೊಳೆಯಪ್ಪ ಉಟಕನೂರು ಮಾತನಾಡಿ ರೈತರ ವಿವಿಧ ಬೇಡಿಕೆ ಈಡೇರಿಕೆಗಾಗಿ ಆ.5 ರಂದು ಬೆಳಿಗ್ಗೆ 10ಕ್ಕೆ ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ರೈತ ಸಂಘದಿಂದ ಬರಕೋಲ್ ಚಳುವಳಿ ಹಾಗೂ ಮಾನ್ವಿ ಬಂದ್ ನಡೆಸಲಾಗುವುದು.**




ರಾಜ್ಯದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿ ಬರಗಾಲ ಇದ್ದರು ಕೂಡ ಇದುವೆರೆಗೂ ರಾಜ್ಯ ಸರಕಾರ ಬರಗಾಲ ಘೋಷಣೆ ಮಾಡಿ ರೈತರಿಗೆ ಎಕರೆಗೆ ಕನಿಷ್ಟ 40 ಸಾವಿರ ಬರಪರಿಹಾರವನ್ನು ನೀಡದೆ ಇರುವುದರಿಂದ ಇಂದು ರೈತರು ತೀವ್ರವಾದ ಸಂಕಷ್ಟದಲ್ಲಿ ಇದ್ದರೆ , ತುಂಗಭದ್ರ ಜಲಾಶಯದಲ್ಲಿ 28 ಟಿ.ಎಂ.ಸಿ ನೀರು ಸಂಗ್ರಹಣೆ ಯಾಗಿದು ಒಳ ಹರಿವು ಕೂಡ ಉತ್ತಮವಾಗಿದೆ ಈ ಬಾರಿ ಕಾರ್ಖನೆಗಳಿಗೆ ನೀರು ಕೊಡದೆ . ರೈತರಿಗೆ ಕಾಲೂವೆ ಮೂಲಕ ನೀರನ್ನು ನಿರಂತರವಾಗಿ ಹರಿಸಿದಲ್ಲಿ ಮಾತ್ರ ರೈತರು ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಜಿಲ್ಲಾಧ್ಯಕ್ಷರಾದ ಕೆ.ವೈ.ಬಸವರಾಜ ಮಾತನಾಡಿ ತಾಲೂಕಿನಲ್ಲಿ ಸರಕಾರಕ್ಕೆ ಜೋಳವನ್ನು ಮಾರಾಟ ಮಾಡಿದ ರೈತರಿಗೆ 5 ತಿಂಗಳು ಕಳೆದರು ಕೂಡ ಹಣ ಜಮೇಯಾಗಿಲ್ಲ.

ಮಳೆ ಇಲ್ಲದೆ ಕೃಷಿ ಚಟುವಟಿ–ಕೆಗಳು ಸ್ಥಗಿತ ಗೊಂಡಿರುವುದರಿಂದ ತಾಲೂಕು ಪಂಚಾಯಿತಿ ವತಿಯಿಂದ ತಾಲೂಕಿನ 17 ಗ್ರಾಮ ಪಂಚಾಯಿತಿಗಳಲ್ಲಿ ಕೂಡಲೇ ವಿ.ಬಿ.ರಾಮಜೀ ಯಡಿಯಲ್ಲಿ ಗ್ರಾಮದಲ್ಲಿಯೇ ಕೂಲಿ ಕಾರ್ಮಿಕರಿಗೆ ಉದ್ಯೋಗವನ್ನು ಸೃಜಿಸಿ ಹೆಚ್ಚು ಕೂಲಿ ಕೆಲಸ ನೀಡುವ ಮೂಲಕ ಗ್ರಾಮೀಣ ಭಾಗದ ಜನರು ಗೂಳೆ ಹೊಗುವುದನ್ನು ತಡೆಯಬೇಕು ಎಂದು ಒತ್ತಾಯಿಸಿದರು. ಶ್ಯಾಮಸಿಂಗ್‌ರಜಪೂತ್ , ತಾಲೂಕು ಗೌರವಾಧ್ಯಕ್ಷರಾದ ವೀರೇಶನಾಯಕ,ಕಾರ್ಯದರ್ಶಿ ಶ್ರೀಧರಕೋಟ್ನೆಕಲ್, ಉರುಕುಂದ ನಾಯಕ ಬಜಾರ,ಬುಜ್ಜಿ ಗೌಡ ,ವೆಂಕಟೇಶ ಕರಡಿಗುಡ್ಡ ಸೇರಿದಂತೆ ಇನ್ನಿತರರು ಇದ್ದರು.

## ಹಾಲಾಪೂರ:ಮಳೆಗಾಗಿದೇವರಿಗೆಜಲಾಭೀಷೆಕಮುಗಿಲು ಮುಟ್ಟಿದ ಶಿವನಾಮ ಸ್ಮರಣೆ

❏ ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ನಾಡಿನಾದ್ಯಂತ ಮಳೆ ಅಭಾವ, ಕೊರತೆಯಿಂದ ಬೀಕರ ಬರಗಾಲ,ಬೆಳನಾಶ, ದನಕರ,ಪ್ರಾಣಿಪಕ್ಷಗಳ ನರಳಾಟ,ಜಲಾಶಯಗಳು ಖಾಲಿ ಇದರಿಂದ ಇಡಿ ಮನುಕುಲವೇ ಚಿಂತಾಭ್ರಾಂತವಾಗಿದೆ**



ಅದಕ್ಕಾಗಿ ಮಸ್ಕಿ ತಾಲ್ಲೂಕಿನ ಹಾಲಾಪೂರ ಗ್ರಾಮದಲ್ಲಿ ಮಳೆ,ಬೆಳೆ ನಾಡು ಸಮ್ರುದ್ದಿಗಾಗಿ ಶ್ರೀ ಬಸವೇಶ್ವರ ದೇವಸ್ತಾನ ಹಾಗೂ ಗ್ರಾಮದ ಎಲ್ಲಾ ದೇವರುಗಳಿಗೆ 501 ಕೊಡ ಜಲಾಭೀಷೆಕವನ್ನು ಹೆಜ್ಜೆ ಕಿತ್ತಲಾರದೆ,ನಿಂತಲ್ಲಿಯೇ ಗ್ರಾಮದ ಗುರುಹಿರಿಯರು,ಯುವಕರು, ಮಹಿಳೆಯರು ಸೇರಿ ಭಕ್ತಿಭಾವ,ಶ್ರದ್ಧೆಯಿಂದ ಹಾಗೂ ಭಜನೆ,ಡೊಳ್ಳು,ಶಿವನಿಗೆ ಅಭಿಷೇಕ, ಮಡಿಸ್ನಾನದೊಂದಿಗೆ ಶಿವನಾಮಧ್ಯಾನ ಮುಗಿಲುಮುಟ್ಟುವಂತೆ ಭಕ್ತಿಪರಾಕಾಷ್ಟೆ ಶಿವನಿಗೆ ಜಲಾಭೀಷೆಕವನ್ನು ಭಕ್ತಿಯಿಂದ ಅರ್ಪಿಸಿ , ಈ ಒಂದು ಭಕ್ತಿಯ ಸೇವೆಗೆ ಸುತ್ತಮುತ್ತಲಿನ ಹಳ್ಳಿಯ ಜನರು ಮೆಚ್ಚುವಂತೆ ಮಾಡಿದ್ದು ಇತರರಿಗೆ ಮಾದರಿಯ ಸಂಗತಿಯಾಗಿದೆ,ಭಗವಂತ ಈಗಲಾದರೂ ನಾಡಿನಾದ್ಯಂತ ಉತ್ತಮ ಮಳೆ ಬೆಳೆ ಕರುಣಿಸಿ ನಾಡು ಸಮೃದ್ದಿಯಾಗಿಲಿ ಎಂಬದು ರೈತರ ಆಶಯವಾಗಿದೆ,

ಭಕ್ತಿ ಸೇವೆಗೆ ಭಗವಂತ ಕೃಪೆಯಿಂದ ಎಲ್ಲರಿಗೂ ಸಂತೋಷ ಹರ್ಷ ತರಲಿ ಎಂಬುದು ಪತ್ರಿಕೆಯ ವಿನಮೃತೆ ಮನವಿ.ಈ ಸಂದರ್ಭದಲ್ಲಿ ಗ್ರಾಮದ ಗುರುಹಿರಿಯರು,ಯುವಕರು,ಮಹಿಳೆಯರು ಇದ್ದರು. ನಂತರ ಎಲ್ಲರಿಗೂ ಮಹಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

## ಗುಡುದೂರು ಗ್ರಾಮ ಆಡಳಿತ ಅಧಿಕಾರಿಯ ವರ್ಗಾವಣೆ ರದ್ದುಗೊಳಿಸಿ ಕೃಷ್ಣಪ್ಪರನ್ನೇ ಮುಂದುವರಿಸುವಂತೆ ಡಿಎಸ್ಎಸ್ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಗುಡದೂರು ಗ್ರಾಮ ಪಂಚಾಯಿತಿಯ ಆಡಳಿತ ಅಧಿಕಾ–ರಿಯ ವರ್ಗಾಮಣೆಯನ್ನು ರದ್ದುಗೊಳಿಸಿ ಅವರನ್ನೇ ಇಲ್ಲಿಯೇ ಮುಂದುವ–ರಿಸಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರು ಆಗ್ರಹಿಸಿದರು.**



ಮಸ್ಕಿ ಪಟ್ಟಣದಲ್ಲಿರುವ ತಾಲೂಕು ಪಂಚಾಯಿತಿ ಕಚೇರಿಯಲ್ಲಿ ತಾಲೂಕು ಪಂಚಾಯಿತಿ ಇಒ ಶಿವಾನಂದ ರೆಡ್ಡಿ ಅವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿ ದರು. ಗುಡೂರು ಗ್ರಾಮ ಪಂಚಾಯಿತಿಯಲ್ಲಿ ಆಡಳಿತ ಅಧಿಕಾ–ರಿಯಾಗಿ ಕೃಷ್ಣಪ್ಪ ಒಂದು ವರ್ಷವು ಕೂಡ ಆಗಿಲ್ಲ ಈಗಾಗಲೇ ಅವರು ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಲು ಶ್ರಮಿಸಿದ್ದಾರೆ ಅಲ್ಲದೆ ವಿ ಬಿ ಜಿ ರಾಮ್ ಯೋಜನೆಯನ್ನು ಸಹ ಜಾರಿಗೆ ಮುಂದುವರಿಸಬೇಕೆಂದು ಒತ್ತಾಯಿಸಿದರು ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ತಾಲೂಕು ಸಂಚಾಲಕ ಬಸವರಾಜ ಕೊಠಾರಿ, ಚಿನ್ನಪ್ಪ ಹಡಿಗಿ ಬಾಳ, ನಾಗಪ್ಪ ದಿನ್ನಮುದ್ರ,ನಿರುಪಾದಿ, ಮೌನೇಶ ತುಗ್ಗಲದಿನ್ನಿ, ಮೌನೇಶ ಸೇರಿದಂತೆ ಇನ್ನಿತರರಿದ್ದರು.

# ಇಂದು ಜುಲೈ 28ರಂದು ಪತ್ರಿಕಾ ದಿನಾಚರಣೆ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಸಂಯುಕ್ತ ಆಶ್ರಯದಲ್ಲಿ ಜುಲೈ 28ರಂದು ಬೆಳಿಗ್ಗೆ 10.30ಕ್ಕೆ ನಗರದ ಪಂಡಿತ್ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಪತ್ರಿಕಾ ದಿನಾಚರಣೆ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ ತಿಳಿಸಿದರು.**



ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವೈದ್ಯಕೀಯ ಹಾಗೂ ಉನ್ನತ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ಎಸ್.ಬೋಸರಾಜು ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಆಶಯ ನುಡಿ ನೀಡಲಿದ್ದು, ಜಿಲ್ಲೆಯ ಶಾಸಕರು, ಸಂಸದರು, ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಆಯುಕ್ತ ಬಿ. ವೆಂಕಟಸಿಂಗ್ ಅವರಿಗೆ ವಿಶೇಷ ಸನ್ಮಾನ ನೆರವೇರಲಿದ್ದು, ಹಿರಿಯ ಪತ್ರಕರ್ತರಾದ ರಂಗನಾಥ ಚಕ್ರವರ್ತಿ, ಶಿವಮೂರ್ತಿ ಹಿರೇಮಠ ಹಾಗೂ ವೀರೇಶ್ ಸೌದ್ರಿ ಅವರಿಗೆ ಜೀವಮಾನ ಸಾಧನೆ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ವಾರ್ಷಿಕ ಪ್ರಶಸ್ತಿಗೆ ರಾಮಕೃಷ್ಣ ದಾಸರಿ, ಚಂದಪ್ಪ ದೋರನಹಳ್ಳಿ, ಸುರೇಶಗೌಡ, ಹನುಮಂತ ಕನ್ನಾಳ, ರಾಜಶೇಖರ, ಆದೇಶ ನಗನೂರು, ಈಶಪ್ಪ ಬೈಲ್ ಮರ್ಚೆಡ್, ಬದ್ರಿನಾಥ, ಬೀರಪ್ಪ ಶಿವಕುಮಾರ ಹಾಗೂ ಮಂಜುನಾಥ ಎತ್ತಿನಮಾಳಗಿ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು. ಅದೇ ದಿನ ಸಂಜೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಪೂರ್ವಭಾವಿ ಸಭೆಯೂ ನಡೆಯಲಿದೆ ಎಂದು ಹೇಳಿದರು.

ಬಳಿಕ ಮಾತನಾಡಿದ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯಕುಮಾರ ಜಾಗಟಗಲ್, ಗಿಲ್ಡ್‌ನ ವಾರ್ಷಿಕ ಪ್ರಶಸ್ತಿಗೆ ಮಂಜುನಾಥ ಸಾಲಿ, ವಾಗೀಶ್ ಪಂಡಿತರಾಧ್ಯ ವಿ.ಪಾಟೀಲ, ಗೌಡಪ್ಪ ಗೌಡ, ಶಶಿಧರ ಅಂಗಡಿ, ಖಾಜಾ ಹುಸೇನ್, ದುರುಗೇಶ ಹಾಗೂ ವಾಸುದೇವ ಎಸ್.ಆಯ್ಕೆಯಾಗಿದ್ದು, ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ರಾಜ್ಯ ಸಮಿತಿ ಸದಸ್ಯ ಬಸವರಾಜ್ ನಾಗಡದಿನ್ನಿ, ಪ್ರಧಾನ ಕಾರ್ಯದರ್ಶಿ ಸಿದ್ದಯ್ಯ ಸ್ವಾಮಿ, ಉಪಾಧ್ಯಕ್ಷ ಮಹಾನಂದ, ಖಜಾಂಚಿ ಮಲ್ಲಿಕಾರ್ಜುನ ಸ್ವಾಮಿ ಹಾಗೂ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಹೂಗಾರ್ ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ನಂಬಿಕೆಯ ದೀಪ

ನಂಬಿಕೆಯ ದೀಪ ಬೆಳಗಿದ ಮನದಲ್ಲಿ,
ಕತ್ತಲೆಯೂ ಕರಗಿ ಹೋಗುತ್ತದೆ ಕ್ಷಣದಲ್ಲಿ.
ಆಶೆಯ ಕಿರಣಗಳು ದಾರಿ ತೋರಿದಾಗ,
ಜೀವನದ ಪಯಣ ಸುಂದರವಾಗುತ್ತದೆ ಆಗ.

ಬಿರುಗಾಳಿ ಬಂದರೂ ಬಾಗದ ಮನ,
ಧೈರ್ಯದ ಹೆಜ್ಜೆಯೇ ಗೆಲುವಿನ ಧನ.
ಸೋಲಿನ ನೋವು ಕಣ್ಣೀರು ತಂದರೂ,
ನಂಬಿಕೆ ಮತ್ತೆ ನಗುವನು ಮೂಡಿಸುತ್ತದೆ.

ಸಣ್ಣ ದೀಪವೇ ಕತ್ತಲೆ ಓಡಿಸುವಂತೆ,
ಸಣ್ಣ ನಂಬಿಕೆಯೇ ಬದುಕು ಬದಲಿಸುವಂತೆ.
ಕನಸುಗಳಿಗೆ ರೆಕ್ಕೆ ಕಟ್ಟುವ ಶಕ್ತಿ,
ನಂಬಿಕೆಯಲ್ಲೇ ಅಡಗಿದೆ ನಿಜವಾದ ಭಕ್ತಿ.

ಪ್ರತಿ ಪ್ರಭಾತ ಹೊಸ ಸಂದೇಶ ತರುತ್ತದೆ,
ಪ್ರತಿ ಸವಾಲು ಹೊಸ ಪಾಠ ಕಲಿಸುತ್ತದೆ.
ನಂಬಿಕೆಯ ದೀಪ ಎಂದಿಗೂ ಆರದಿರಲಿ,
ಜೀವನದ ಹಾದಿ ಸದಾ ಬೆಳಗುತ್ತಿರಲಿ.

ಮನದೊಳಗಿನ ಬೆಳಕು ಎಂದಿಗೂ ಕ್ಷೀಣಿಸದಿರಲಿ,
ಸತ್ಕಾರ್ಯದ ದಾರಿಯಲ್ಲಿ ಹೆಜ್ಜೆ ನಿಲ್ಲದಿರಲಿ.
ನಂಬಿಕೆಯ ದೀಪ ಕೈಯಲ್ಲಿ ಹೊತ್ತವರ ಬದುಕು,
ಯಶಸ್ಸಿನ ಶಿಖರವೇರಿ ಹೊಳೆಯಲಿ ಸದಾಕಾಲ.

–ಅಮರೇಶ

## ಅಮೀನಗಡ –ಮಳೆಗಾಗಿ ಸಪ್ತ ಭಜನೆ

❑ ನೈಜ್ಯ ದೆಸೆ ನ್ಯೂಸ್



**ಕವಿತಾಳ:** ಮಳೆರಾಯನ ಕೃಪೆಗಾಗಿ ಹಾಗೂ ಉತ್ತಮ ಬೆಳೆಗಾಗಿ ಗ್ರಾಮಗಳಲ್ಲಿ ಸಾಂಪ್ರದಾಯಿಕ ಪೂಜೆ–ಪುನಸ್ಕಾರಗಳು ಮುಂದುವರಿದಿದ್ದು, ಇದರ ಭಾಗವಾಗಿ ಕವಿತಾಳ ಸಮೀಪದ ಅಮೀನಗಡ ಗ್ರಾಮದ ಈಶ್ವರ ದೇವಸ್ಥಾನದಲ್ಲಿ ಭಕ್ತರು ಮೂರು ದಿನಗಳ ಅಹೋರಾತ್ರಿ 'ಸಪ್ತ ಭಜನೆ' ಯನ್ನು ವಿಧ್ಯುಕ್ತವಾಗಿ ಆರಂಭಿಸಿದ್ದಾರೆ.

ಸೋಮವಾರ ಬೆಳಗಿನ ಜಾವ ದೇವರಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ಮಹಾಮಂಗಳಾರತಿ ಸಲ್ಲಿಸುವ ಮೂಲಕ ಈ ಧಾರ್ಮಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಗ್ರಾಮದ ರೈತರು, ಹಿರಿಯರು, ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ವರುಣದೇವ ಕರುಣೆ ತೋರಲೆಂದು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ವರುಣ ದೇವ ಹಾಗೂ ಜಗದೀಶ್ವರನನ್ನು ಒಲಿಸಿಕೊಳ್ಳಲು ಈಶ್ವರ ದೇವಸ್ಥಾನದಲ್ಲಿ ವಿಶೇಷ ರುದ್ರಾಭಿಷೇಕ, ಬಿಲ್ವಪತ್ರೆ ಅರ್ಚನೆ ಮತ್ತು ನಿರಂತರ ಭಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸತತ ಮೂರು ದಿನಗಳ ಕಾಲ ಹಗಲು–ರಾತ್ರಿ ಎನ್ನದೆ ತಮಟೆ, ತಾಳ ಹಾಗೂ ಹರ್ಮೋನಿಯಂ ಹಾರ್ಮೋನಿಯಂ ಹರ್ಮಾಳದೊಂದಿಗೆ ಭಕ್ತರು ಭಜನಾ ಕೀರ್ತನೆಗಳನ್ನು ಹಾಡುವುದರ ಮೂಲಕ ದೈವಿಕ ವಾತಾವರಣ ನಿರ್ಮಿಸುತ್ತಿದ್ದಾರೆ.

ಪ್ರಸ್ತುತ ಮಳೆ ಕೈಕೊಟ್ಟಿರುವ ಕಾರಣ ರೈತರು ಬಿತ್ತನೆ ಕಾರ್ಯ ಮಾಡಲು ಹಾಗೂ ಬೆಳೆಗಳನ್ನು ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರಾಮದ ಸಮಸ್ತ ಜನತೆ ಒಗ್ಗಟ್ಟಾಗಿ ದೈವದ ಮೊರೆ ಹೋಗಿದ್ದಾರೆ. ಕೇವಲ ಮಳೆಗಾಗಿ ಮಾತ್ರವಲ್ಲದೆ, ಗ್ರಾಮದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ತಡೆಯಲು ಮತ್ತು ನಾಡಿನಲ್ಲಿ ಶಾಂತಿ–ಸುಖ–ಸಮೃದ್ಧಿ ನೆಲೆಸಲಿ ಎಂಬ ಸದುದ್ದೇಶದಿಂದ ಈ ಸಪ್ತ ಭಜನೆಯನ್ನು ಆಯೋಜಿಸಲಾಗಿದೆ. ಅಮೀನಗಡ ಗ್ರಾಮದ ಭಕ್ತ ಮಂಡಳಿ ಹಾಗೂ ಸಮಸ್ತ ಗ್ರಾಮಸ್ಥರು.

## ನಾಳೆ ಜುಲೈ 29ರಿಂದ ಕವಿತಾಳದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭ

### ನಿವೇಶನ ವಿತರಣೆ ಮಾಡಿ ಅರ್ಧ ಶತಮಾನ ಆದರೂ ಹಕ್ಕು ಪತ್ರ ನೀಡಿದೆ ವಿಳಂಬ ಮಾಡುತ್ತಿದ್ದಾರೆ

❑ ನೈಜ್ಯ ದೆಸೆ ನ್ಯೂಸ್




**ಕವಿತಾಳ: 'ಪಟ್ಟಣದಲ್ಲಿನ ಸರ್ವೆ ನಂ–12,13,14ರಲ್ಲಿ ಬಡ ಕುಟುಂಬಗಳಿಗೆ ನಿವೇಶನ ವಿತರಿಸಿ 50 ವರ್ಷ ಕಳೆದರೂ ಜಮೀನು ಈಗಲೂ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಉಳಿದಿದೆ. ಅದನ್ನು ತೆಗೆದು ರಾಜ್ಯಪಾಲರ ಹೆಸರಿಗೆ ನೋಂದಾಯಿಸಿ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಬೇಕು' ಎಂದು ದಲಿತ, ಪ್ರಗತಿ ಪರ ಸಂಘಟನೆಗಳ ಒಕ್ಕೂಟದ ಮುಖಂಡರಾದ ಅರಳಪ್ಪ ತುಪ್ಪದೂರು, ಈರಣ್ಣ ಕೆಳಗೇರಿ ಮತ್ತು ಹುಚ್ಚಪ್ಪ** ವಡವಟ್ಟಿ ಆಗ್ರಹಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಈಗಾಗಲೇ ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿಗೆ ಮನವಿ ಸಲ್ಲಿಸಲಾಗಿದೆ. ಅಧಿಕಾ–ರಿಗಳು ಸ್ಪಂದಿಸದಿದ್ದರೆ ಜು.29ರಿಂದ ಪಟ್ಟಣ ಪಂಚಾಯಿತಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು' ಎಂದರು. 'ಪಟ್ಟಣ ಮತ್ತು ಸುತ್ತಲಿನ ಹಳ್ಳಿಗಳ ವ್ಯಾಪ್ತಿಯಲ್ಲಿ ಭೂಸೇನಾ ನಿಗಮದ ವತಿಯಿಂದ ಕೈಗೊಂಡ ವಿವಿಧ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿದ್ದು, ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.

ಎನ್.ಎಸ್.ಬೋಸರಾಜು ಕಾಲೊನಿ ಅಭಿವೃದ್ಧಿಗೆ ಯೋಜನೆ ರೂಪಿಸಬೇಕು ಮತ್ತು ಯಕ್ಲಾಸ್ಪುರ ಹಾಗೂ ಪರಸಾಪುರ ಬಳಿ ಇರುವ ಇಟ್ಟಿಗೆ ತಯಾರಿಸುವ ಬಟ್ಟಿಗಳಿಂದ ಮಾಲಿನ್ಯ ಉಂಟಾಗುತ್ತಿದ್ದು, ಅವುಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು. ಮುಖಂಡರಾದ ರಮೇಶ ಇರಬಗೇರ, ಹನುಮಂತ ಬುಳ್ಳಾಪುರ, ಮೌನೇಶ ಬುಳ್ಳಾಪುರ, ಹುಚ್ಚಪ್ಪ ಬುಳ್ಳಾಪುರ, ಫಕೀರಪ್ಪ, ಲಾಳೆಪ್ಪ ಕಲಂಗೇರಿ, ಬಸವರಾಜ ಕೆಳಗೇರಿ, ಹುಸೇನಸಾಬ್, ಅಂಬಣ್ಣ ಬುಳ್ಳಾಪುರ, ವೆಂಕಟೇಶ ಭೋವಿ ಮತ್ತು ಮೌನೇಶ ಕಲಂಗೇರ ಉಪಸ್ಥಿತರಿದ್ದರು.

## ಸುಕ್ಷೇತ್ರ ದೇವರ ಭೂಪೂರಿನ ಸಂಸ್ಥಾನ ಬೃಹನ್ಮಠದಿಂದ ಕಾರುಣ್ಯಾಶ್ರಮಕ್ಕೆ ಆಹಾರ ಧಾನ್ಯಗಳ ವಿತರಣೆ

❑ ನೈಜ್ಯ ದೆಸೆ ನ್ಯೂಸ್




ಸಿಂಧನೂರು: ಲಿಂಗಸುಗೂರು ತಾಲೂಕಿನ ಗುರುಗುಂಟಾ ಸುಕ್ಷೇತ್ರದ ಶ್ರೀ ಮದ್ ಅಮರಗುಂಡ ತೋಪಿನಕಟ್ಟಿ ಸಂಸ್ಥಾನ ಬ್ರಹನ್ಮಠದ ಶ್ರೀ ಅಮರೇಶ್ವರ ಸುಕ್ಷೇತ್ರ ದೇವರ ಭೂಪೂರಿನ ಶ್ರೀ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಪೂಜ್ಯಶ್ರೀ ಷ.ಬ್ರ. ಅಭಿನವ ಗಜದಂಡ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಸಿಂಧನೂರು ನಗರದಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಆಗುವ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಹಸಿವು ನೀಗಿಸುವ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಆಶ್ರಮಕ್ಕೆ ಸುಮಾರು ಮೂರುವರೆ ಕ್ವಿಂಟಲ್ ಅಕ್ಕಿ ಹಾಗೂ ಒಂದುವರೆ ಕ್ವಿಂಟಲ್ ಉಳ್ಳಾಗಡ್ಡಿ ಮತ್ತು ಇನ್ನಿತರ ಆಹಾರ ಧಾನ್ಯಗಳನ್ನು ಕಳುಹಿಸುವ ಮೂಲಕ ಸೇವೆಗೆ ಆಶೀರ್ವದಿಸಿದ್ದಾರೆ.

ಈ ಆಹಾರ ಧಾನ್ಯಗಳನ್ನು ಶ್ರೀಮಠದ ಭಕ್ತರಾದ ದೇವರ ಭೂಪೂರಿನ ನಾಗರಾಜ ದ್ಯಾಪೂರು ಹಾಗೂ ಹನುಮಯ್ಯ ಗದ್ದಿಗಿ ಇವರುಗಳು ಕಾರುಣ್ಯ ಆಶ್ರಮಕ್ಕೆ ತಲುಪಿಸಿದರು. ಈ ಸಮಯದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಅಮರೇಶ್ವರ ಗುರು ಶ್ರೀ ಷ. ಬ್ರ. ಅಭಿನವ ಗಜದಂಡ ಶಿವಯೋಗಿ ಶಿವಾಚಾರ್ಯರು ಕಾರುಣ್ಯ ಕುಟುಂಬದ ಕಾರುಣ್ಯ ಮೂರ್ತಿಗಳಾಗಿ ನಿರಂತರ ಆಶೀರ್ವದಿಸುತ್ತಾ ಅಂದ ಅನಾಥರ ಬಾಳಿಗೆ ಬೆಳಕಾಗಿದ್ದಾರೆ. ನಾಡಿನ ಶ್ರೀಮಠಗಳ ಹರ ಗುರು ಚರಮೂರ್ತಿಗಳ ಆಶೀರ್ವಾದವೇ ಕಾರುಣ್ಯ ಆಶ್ರಮದ ಸೇವೆಗೆ ಶಕ್ತಿ. ಈ ಕಾರುಣ್ಯ ಆಶ್ರಮದ ಸೇವೆಯು ಪ್ರತಿಯೊಬ್ಬ ದಾನಿಗಳ ಸಹಾಯ ಸಹಕಾರ ಮತ್ತು ಆಶ್ರಮದ ಸೇವೆಯ ಬಗ್ಗೆ ಟೀಕೆ ಟಿಪ್ಪಣಿ ಅವಮಾನ ಅಪಪ್ರಚಾರಗಳನ್ನು ಮಾಡುವಂತಹ ಪುಣ್ಯಾತ್ಮರೇ ನಮಗೆ ಸ್ಫೂರ್ತಿಗಳಾಗಿದ್ದಾರೆ.

ನಾವು ಮಾಡುತ್ತಿರುವ ಕಾರ್ಯ ಅಂತರಾತ್ಮ ಪರಮಾತ್ಮ ಅರಿತುಕೊಂಡರೆ ಸಾಕು ಎನ್ನುವ ಆತ್ಮತೃಪ್ತಿಯೊಂದಿಗೆ ಸೇವೆ ಮಾಡುತ್ತಿದ್ದೇವೆ. ಇಂದು ದೇವರ ಭೂಪೂ–ರಿನ ಶ್ರೀಮಠದ ಈ ಸೌಜನ್ಯದ ಆಶೀರ್ವಾದ ನಮ್ಮನ್ನು ಇನ್ನು ಹೆಚ್ಚಿನ ಸೇವೆ ಮಾಡಲು ಆಶೀರ್ವದಿಸಿದೆ. ಶ್ರೀಗಳ ಆಶೀರ್ವಾದ ನಿರಂತರವಾಗಿರಲಿ ಎನ್ನುವುದು ಕಾರುಣ್ಯ ಕುಟುಂಬದ ಮೂಲ ಆಶಯವಾಗಿದೆ ಎಂದು ಭಾವನಾತ್ಮಕವಾಗಿ ಮಾತನಾಡಿ. ಪರಮಪೂಜ್ಯ–ರಿಗೆ ಧನ್ಯವಾದಗಳನ್ನು ತಿಳಿಸಿದರು.

ಈ ಸಮಯದಲ್ಲಿ ನಾಗರಾಜ ದ್ಯಾಪೂರು ದೇವರ ಭೂಪೂರು. ಹನುಮಯ್ಯ ಗದ್ದಿಗಿ ದೇವರ ಭೂಪೂರು. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ ಮ–ರಿಯಪ್ಪ.ಜ್ಯೋತಿ. ಅನೇಕರು ಉಪಸ್ಥಿತರಿದ್ದರು.

## ಎಬಿಡಿ ಫೌಂಡೇಶನ್ ಬಳಗದಿಂದ ಪ್ರಸಾದ ಸೇವೆ

❑ ನೈಜ್ಯ ದೆಸೆ ನ್ಯೂಸ್



**ತಾಳಿಕೋಟಿ: ಪಟ್ಟಣದ ಐತಿಹಾಸಿಕ ಶ್ರೀ ಖಾಸ್ಗತೇಶ್ವರ ಮಠದ ಜಾತ್ರಾ ಮಹೋತ್ಸವದ ಕೊನೆಯ ದಿನದ ವಿಶೇಷ ಕಾರ್ಯಕ್ರಮಗಳಾದ ಆನೆ ಅಂಬಾರಿ ಹಾಗೂ ಮಹಾ ರಥ–ೋತ್ಸವಕ್ಕೆ ಆಗಮಿಸುವ ಸಾವಿರಾರು ಭಕ್ತರಿಗೆ ಮುಖಂಡ ಆನಂದ ದೊಡ್ಡಮನಿ ನೇತೃತ್ವದ ಎಬಿಡಿ ಫೌಂಡೇಶನ್ ಹಾಗೂ ಕುಚುಕು ಗೆಳೆಯರ ಬಳಗದ ವತಿಯಿಂದ ವಿಶೇಷ ಪ್ರಸಾದ ವ್ಯವಸ್ಥೆಯನ್ನು ಮಾಡಲಾಯಿತು.**

ಸೋಮವಾರ ಬೆಳಿಗ್ಗೆ 9:00 ಘಂಟೆಯಿಂದ ಆರಂಭವಾದ ಈ ಮಹಾಪ್ರಸಾದ ಸೇವಾ ಕಾರ್ಯಕ್ರಮಕ್ಕೆ ಫೌಂಡೇಶನ್ ಅಧ್ಯಕ್ಷರಾದ ಆನಂದಗೌಡ ದೊಡ್ಡಮನಿ ಬಳಗದ ಸದಸ್ಯರ ಜೊತೆಗೂಡಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆನಂದಗೌಡ ದೊಡ್ಡಮನಿ ಅವರು ಮಾತನಾಡಿ ಕಳೆದ 8 ವರ್ಷಗಳಿಂದ ನಮ್ಮ ಎಬಿಡಿ ಫೌಂಡೇಶನ್ ಹಾಗೂ ಕುಚುಕು ಗೆಳೆಯರ ಬಳಗದ ವತಿಯಿಂದ ಅಜ್ಜನ ಜಾತ್ರೆಗೆ ಬರುವ ಭಕ್ತ–ರಿಗೆ ವಿಶೇಷ ಪ್ರಸಾದ ವ್ಯವಸ್ಥೆಯನ್ನು ಮಾಡಿಕೊಂಡು ಬರಲಾಗುತ್ತಿದೆ. ಈ ಬಾರಿಯೂ ವಿಶೇಷ ಆಹಾರ ಪದಾರ್ಥಗಳಾದ ಶಿರಾ ಹಾಗೂ ಪಲಾವ್ ಸಿದ್ಧಪಡಿಸಲಾಗಿದೆ.

ಭಕ್ತರು ದಯವಿಟ್ಟು ಶಾಂತ–ರೀತಿಯಿಂದ ಪ್ರಸಾದವನ್ನು ಸ್ವೀಕರಿಸಿಕೊಂಡು ಹೋಗಬೇಕೆಂದು ನಾವು ಕೇಳಿಕೊಳ್ಳುತ್ತೇವೆ ಎಂದರು. ಈ ಸಮಯದಲ್ಲಿ ಬಳಗದ ಪದಾಧಿಕಾರಿಗಳಾದ ಶ್ರೀಶೈಲ ಸಜ್ಜನ, ಬಿ ಎಚ್ ವಠಾರ, ಶೇಖಪ್ಪ ಇಜೇರಿ, ಸೋಮು ಬಂಟನೂರ, ರಾಜುಗೌಡ ಪಾಟೀಲ, ಯಲಗುರೇಶ ಚಬನೂರ, ಗಜಾನನ ಸೋನಾರ, ರಾಘವೇಂದ್ರ ಶೆಟ್ಟಿ, ಮಲ್ಲು ಕೋರಿ ಮಲ್ಲು ದೇವಶೆಟ್ಟಿ, ವೀರಭದ್ರಪ್ಪ ಸಿಲುವಂತ,ಗುರು ಹೊಳಿ ಹಾಗೂ ಬಳಗದ ಪದಾಧಿಕಾರಿಗಳು ಇದ್ದರು.

### ದೇಶ ರಕ್ಷಣೆಗಾಗಿ ಪ್ರಾಣವನ್ನು ಅರ್ಪಿಸಿದ ವೀರಯೋಧರನ್ನು ಸ್ಮರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ– ಮಲ್ಲಯ್ಯ ನಾಯಕ ಮಾಜಿ ಯೋಧ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ದೇಶದ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ವೀರ ಯೋಧರನ್ನು ಸ್ಮರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು ನಿವೃತ್ತ ಯೋಧ ಮಲ್ಲಯ್ಯ ನಾಯಕ ದೇವಪುರ ಹೇಳಿದರು.ಪಟ್ಟಣದ ಕಲ್ಮಠ ಪದವಿ ಮಹಾವಿದ್ಯಾಲಯದ ವತಿಯಿಂದ ಕಾರ್ಗಿಲ್ ವಿಜಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.




ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಯೋಧರು ತೋರಿದ ಶೌರ್ಯ ತ್ಯಾಗ ಹಾಗು ದೇಶಭಕ್ತಿಯ ಕುರಿತು ಮಾತನಾಡಿದರು ಎಂದರೆ ಒಂದು ಕುಟುಂಬವಿದ್ದಂತೆ ನಮ್ಮ ಕುಟುಂಬದ ಮೇಲೆ ಯಾರೇ ಆಕ್ರಮಣ ಮಾಡಿದರು ನಾವು ವಿರೋಧಿಸುವ ಶಕ್ತಿಯಾಗಬೇಕು ದೇಶ ಪ್ರೇಮವನ್ನು ಬೆಳೆಸಿಕೊಳ್ಳಿ ಸಂದರ್ಭ ಅನುಸಾರವಾಗಿ ಪ್ರಾಣ ತ್ಯಾಗಕ್ಕೂ ಸಿದ್ದರಾಗಬೇಕು ವಿದ್ಯಾರ್ಥಿಗಳಿಗೆ ತಿಳಿಸಿದರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ರಾಘವೇಂದ್ರ ಸುಂಕೇಶ್ವರ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಉಪನ್ಯಾಸಕ ಉಪನ್ಯಾಸಕಿ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಗಿಲ್ ವೀರಯೋಧರಿಗೆ ಗೌರವ ನಮನ ಸಲ್ಲಿಸಿದರು ಈ ಕಾರ್ಯಕ್ರಮವನ್ನು ಸಹನಾ ನಿರೂಪಿಸಿದರು ಅನುಷಾ ಸ್ವಾಗತಿದರು ಹಾಗೂ ಅನುಷಾ ಆ ವಂದಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ತೀವ್ರ ಚರ್ಚೆಗೆ ಗ್ರಾಸವಾಗಿದೆ ಡಿಜಿಟಲ್ ಸಮಾಲೋಚನಾ ವರ್ಗಾವಣಾ ವ್ಯವಸ್ಥೆ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯ ಸರ್ಕಾರದ ಮುದ್ರಾಂಕ ಮತ್ತು ನೋಂದಣಿ ಇಲಾಖೆಯಲ್ಲಿ ವರ್ಗಾವಣೆ ಪ್ರಕ್ರಿಯೆಯನ್ನು ಸಂಪೂರ್ಣ ಪಾರದರ್ಶಕಗೊಳಿಸುವ ಉದ್ದೇಶದಿಂದ ಜಾ–ರಿಗೆ ತರಲು ಉದ್ದೇಶಿಸಿರುವ ಡಿಜಿಟಲ್ ಸಮಾಲೋಚನಾ ವರ್ಗಾವಣೆ ವ್ಯವಸ್ಥೆಯು ಪ್ರಸ್ತುತ ತೀವ್ರ ಚರ್ಚೆಗೆ ಗ್ರಾಸವಾಗಿದೆ.**

ಈ ಹೊಸ ಪದ್ಧತಿಯನ್ನು ರದ್ದುಗೊಳಿಸಬೇಕು ಅಥವಾ ಮುಂದಿನ ವರ್ಷಕ್ಕೆ ಮುಂದೂಡಬೇಕು ಎಂಬ ಒತ್ತಡಗಳು ಕೇಳಿಬಂದಿದ್ದು, ಇಲಾಖೆಯಲ್ಲಿ ಪರ–ವಿರೋಧದ ಬಿಸಿ ಮುಟ್ಟಿದೆ.ಇಲಾಖೆಯಲ್ಲಿ ವರ್ಷಗಳಿಂದ ಬೇರೂರಿದ್ದ ಭ್ರಷ್ಟಾಚಾರ, ರಾಜಕೀಯ ಲಾಬಿ ಮತ್ತು ಪ್ರಭಾವಿ ಸ್ಥಳಗಳಿಗೆ (ವಿಶೇಷವಾಗಿ ಬೆಂಗಳೂರು ಹಾಗೂ ಅಧಿಕ ಆದಾಯ ಬರುವ ಪ್ರದೇಶಗಳಿಗೆ) ವರ್ಗಾವಣೆ ಪಡೆಯಲು ನಡೆಯುತ್ತಿದ್ದ ಅವ್ಯವಹಾರಗಳಿಗೆ ಕಡಿವಾಣ ಹಾಕಲು ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿತ್ತು.

ರಾಜ್ಯ ಸರ್ಕಾರವು ಮೇ 27, 2026 ರಂದು ಕರ್ನಾಟಕ ನಾಗರಿಕ ಸೇವಾ (ಮುದ್ರಾಂಕ ಮತ್ತು ನೋಂದಣಿ ಇಲಾಖೆಯಲ್ಲಿ ಸಮಾಲೋಚನೆ ಆಧರಿತ ವರ್ಗಾವಣೆ) ನಿಯಮಗಳು–2026 ಅನ್ನು ಅಧಿಕೃತವಾಗಿ ಅಧಿಸೂಚಿಸಿತು. ಹಿರಿಯ ಉಪ ನೋಂದಣಾಧಿಕಾ–ರಿಗಳು, ಉಪ ನೋಂದಣಾಧಿಕಾರಿಗಳು ಹಾಗೂ ಪ್ರಥ–'ಮ ದರ್ಜೆ ಸಹಾಯಕರ ವರ್ಗಾವಣೆಯನ್ನು ಕೇವಲ ಡಿಜಿಟಲ್ ಸಮಾಲೋಚನೆ ಮೂಲಕವೇ ನಡೆಸಲು ನಿರ್ಧರಿಸಲಾಗಿತ್ತು.ನೋಂದಣಿ ಕಚೇರಿಗಳನ್ನು ಎ, ಬಿ ಮತ್ತು ಸಿ ವಲಯಗಳಾಗಿ ವಿಂಗಡಿಸಿ, ನಿರ್ದಿಷ್ಟ ಅವಧಿ ಪೂರೈಸಿದವರನ್ನು ಕಡ್ಡಾಯ ವರ್ಗಾವಣೆಗೊಳಪಡಿಸಲು ಕಟ್ಟುನಿಟ್ಟಿನ ಮಾನದಂಡಗಳನ್ನು ರೂಪಿಸಲಾಗಿತ್ತು.

ವರ್ಗಾವಣೆ ಪ್ರಕ್ರಿಯೆ ವಿರೋಧಿಸಲು ಕಾರಣಗಳೇನು? : ಕರ್ನಾಟಕ ರಾಜ್ಯ ಮುದ್ರಾಂಕ ಮತ್ತು ನೋಂದಣಿ ಇಲಾಖೆ ನೌಕರರ ಸಂಘ ಹಾಗೂ ಒಂದು ವರ್ಗದ ಅಧಿಕಾ–ರಿಗಳು ಈ ಡಿಜಿಟಲ್ ಸಮಾಲೋಚನಾ ಪ್ರಕ್ರಿಯೆಯನ್ನು ವಿರೋಧಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.ಪ್ರಸ್ತುತ



ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಅಥವಾ ತರಾತು–ರಿಯಲ್ಲಿ ವರ್ಗಾವಣೆ ಮಾಡುವುದರಿಂದ ಅಧಿಕಾ–ರಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಮತ್ತು ಕುಟುಂಬದ ನಿರ್ವಹಣೆಗೆ ವ್ಯತ್ಯಯವಾಗುತ್ತದೆ ಎಂಬ ವಾದವನ್ನು ನೌಕರರ ಸಂಘ ಮುಂದಿಟ್ಟಿದೆ.

ಇಲಾಖೆಯಲ್ಲಿ ವರ್ಗಾವಣೆಗೆ ಅರ್ಹವಿರುವ ಒಟ್ಟು ಅಧಿಕಾರಿಗಳ ಸಂಖ್ಯೆ ತೀರಾ ಕಡಿಮೆಯಿರುವಾಗ (ಶೇಕಡಾ 6ರಷ್ಟು ಮಾತ್ರ), ಇಡೀ ಡಿಜಿಟಲ್ ಸಮಾಲೋಚನಾ ಪ್ರಕ್ರಿಯೆಯನ್ನು ಜಾರಿಗೊಳಿಸುವುದು ಅಪ್ರಾಯೋಗಿಕ ಎಂಬುದು ಅವರ ವಾದ.ಡಿಜಿಟಲ್ ಸಮಾಲೋಚನೆಯಿಂದ ಆಡಳಿತಾತಕ ಸುಧಾರಣೆ ಮತ್ತು ಹಿರಿಯ ಅಧಿಕಾರಿಗಳ ವಿವೇಚನಾ ಅಧಿಕಾರಕ್ಕೆ ಕತ್ತರಿ ಬೀಳಲಿದೆ ಎಂಬುದು ವಿರೋಧಿಸುವವರ ಅಭಿಪ್ರಾಯ. ಪರವಾಗಿರುವವರ ವಾದ : ಮತ್ತೊಂದೆಡೆ, ಇಲಾಖೆಯ ಕೆಲ ಪ್ರಾಮಾಣಿಕ ಅಧಿಕಾರಿಗಳು ಮತ್ತು ಸುಧಾರಣಾ ವಾದಿಗಳು ಹೊಸ ಡಿಜಿಟಲ್ ಪದ್ಧತಿಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಸಿಂಡಿಕೇಟ್ಗಳಿಗೆ ಬ್ರೇಕ್: ಕೆಲವು ಪ್ರಭಾವಿ ಅಧಿಕಾರಿಗಳು ಹಣ ಮತ್ತು ರಾಜ–ಕೀಯ ಪ್ರಭಾವ ಬಳಸಿ ಕೇವಲ ಲಾಭದಾಯಕ ಕಚೇ–ರಿಗಳಲ್ಲೇ ವರ್ಷಗಟ್ಟಲೆ ತಿಷ್ಠೆ ಹೂಡುವುದನ್ನು ತಪ್ಪಿಸಲು ಈ ವ್ಯವಸ್ಥೆ ಅತ್ಯಗತ್ಯ ಎಂದು ವಾದಿಸಲಾಗಿದೆ.

ಡಿಜಿಟಲ್ ಸಮಾಲೋಚನೆ ಜಾರಿಗೆ ಬಂದರೆ ಯಾವುದೇ ಶಿಫಾರಸು ಇಲ್ಲದೆ, ಪಾರದರ್ಶಕವಾಗಿ ಕೌನ್ಸೆಲಿಂಗ್ ಮೂಲಕ ಯೋಗ್ಯ ಸ್ಥಳಗಳಿಗೆ ನಿಯೋಜನೆ ಪಡೆಯಲು ಪ್ರಾಮಾಣಿಕ ಸಿಬ್ಬಂದಿಗೆ ನ್ಯಾಯ ಸಿಗುತ್ತದೆ ಎಂಬುದು ಇವರ ವಾದವಾಗಿದೆ. ಕಂದಾಯ ಸಚಿವರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಜೊತೆ ನಡೆದ ಸಭೆಗಳಲ್ಲಿ ಈ ಕುರಿತು ಸಾಧಕ–ಬಾಧಕಗಳ ಚರ್ಚೆ ನಡೆಲಾಗಿದೆ. ನೌಕರರ ಸಂಘವು ಈ ವ್ಯವಸ್ಥೆಯನ್ನು ಕನಿಷ್ಠ ಒಂದು ವರ್ಷ ಮುಂದೂಡಬೇಕೆಂದು ಪಟ್ಟು ಹಿಡಿದಿದ್ದರೆ, ಸಾರ್ವಜನಿಕ ವಲಯದಲ್ಲಿ ಮತ್ತು ಇಲಾಖೆಯ ಪಾರದರ್ಶೆಯನ್ನು ಬಯಸುವವ–ರಿಂದ ಇದಕ್ಕೆ ತೀವ್ರ ಬೆಂಬಲ ವ್ಯಕ್ತವಾಗಿದೆ. ಕಂದಾಯ ಇಲಾಖೆಯು ಈ ಕುರಿತು ಸಾಧಕ–ಬಾಧಕಗಳ ಸಮಗ್ರ ವರದಿಯನ್ನು ಸಿದ್ಧಪಡಿಸುತ್ತಿದ್ದು, ಸರ್ಕಾರದ ಅಂತಿಮ ನಿರ್ಧಾರದ ಮೇಲೆ ಇಲಾಖೆಯ ಮುಂದಿನ ಆಡಳಿತಾತಕ ಸುಧಾರಣೆಗಳು ನಿಂತಿವೆ.

## ನೇಮಕಾತಿ ಪ್ರಕಟಣೆ

**KVAFSU ನೇಮಕಾತಿ 2026 1 ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇರ ಸಂದರ್ಶನ (Walk-in Interview) 27 ಜುಲೈ 2026**

KVAFSU ನೇಮಕಾತಿ 2026: 1 ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು (KVAFSU) ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಪ್ರಾಧ್ಯಾಪಕ ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30-ಜುಲೈ-2026 ರಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: kvafsu.edu.in

## ರೈಲು ಹಳಿ ಕಾಮಗಾರಿಗೆ ಅಗೆದ ಗುಂಡಿಯಲ್ಲಿ ಬಿದ್ದು 8 ವರ್ಷದ ಬಾಲಕ ಸಾವು

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮುನಿರಾಬಾದ್ ಮೆಹಬೂಬ್ ನಗರ ರೈಲು ಮಾರ್ಗದ ಹಳಿ ನಿರ್ಮಾಣಕ್ಕೆ ಅಗತ್ಯವಿದ್ದ ಮಣ್ಣಿನ ಸಲುವಾಗಿ ಅಗೆದಿದ್ದ ಗುಂಡಿಯಲ್ಲಿ ಎಂಟು ವರ್ಷದ ಬಾಲಕ ಬಿದ್ದು ಸಾವನ್ನಪ್ಪಿದ ಘಟನೆ ಮಾನ್ವಿ ತಾಲ್ಲೂಕು ಕಪಗಲ್ ಹೊರವಲಯದಲ್ಲಿ ನಡೆದಿದೆ.**



ಬಾಲಕ ಯಶವಂತ್ (8) ದುರ್ದೈವಿ. ಮಣ್ಣಿಗಾಗಿ ಅಗೆದಿದ್ದ ಗುಂಡಿಯನ್ನು ಹಾಗೆಯೇ ಬಿಡಲಾಗಿತ್ತು. ಈಚೆಗೆ ಸುರಿದ ಮಳೆಯಿಂದಾಗಿ ಗುಂಡಿಯಲ್ಲಿ ನೀರು ತುಂಬಿತ್ತು. ಶಾಲೆಗೆ ರಜೆ ಇದ್ದಿದ್ದರಿಂದ ಭಾನುವಾರ ಪೋಷಕರೊಂದಿಗೆ ಜಮೀನಿಗೆ ಬಂದಿದ್ದ ಬಾಲಕ, ಆಟವಾಡುತ್ತಾ ಬಂದು ಗುಂಡಿಯಲ್ಲಿ ಬಿದ್ದಿದ್ದಾನೆ. ಕೆಲಸದಲ್ಲಿ ಮಗ್ನರಾಗಿದ್ದ ಪಾಲಕರಿಗೆ ಬಾಲಕ ಬಿದ್ದಿದ್ದು ಮೊದಲು ತಿಳಿದಿರಲಿಲ್ಲ. ಕೆಲ ಹೊತ್ತಿನ ನಂತರ ಮಗನಿಗಾಗಿ ಅವರು ಹುಡುಕಿದಾಗ ಗುಂಡಿಯಲ್ಲಿ ಶವ ಸಿಕ್ಕಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಪೋಷಕರು ನೀಡಿದ ದೂರಿನನ್ವಯ ರೈಲು ಮಾರ್ಗ ನಿರ್ಮಾಣ ಕಾಮಗಾರಿಯ ಗುತ್ತಿಗೆದಾರರ ವಿರುದ್ಧ ಮಾನ್ವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಡಾ.ಪ್ರಭುಗೌಡ ಲಿಂಗದಳ್ಳಿ ಬಳಗದಿಂದ ಪ್ರಸಾದ ಸೇವೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಐತಿಹಾಸಿಕ ಶ್ರೀ ಖಾಸ್ಗತೇಶ್ವರ ಮಠದ ಜಾತ್ರಾ ಮಹೋತ್ಸವದ ಕೊನೆಯ ದಿನದ ವಿಶೇಷ ಕಾರ್ಯಕ್ರಮಗಳಾದ ಆನೆ ಅಂಬಾರಿ ಹಾಗೂ ಮಹಾ ರಥೋತ್ಸವಕ್ಕೆ ಆಗಮಿಸುವ ಸಾವಿರಾರು ಭಕ್ತರಿಗೆ ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ. ಪ್ರಭುಗೌಡ ಲಿಂಗದಳ್ಳಿ ಅಭಿಮಾನಿ ಬಳಗದ ವತಿಯಿಂದ ವಿಶೇಷ ಪ್ರಸಾದ ವ್ಯವಸ್ಥೆಯನ್ನು ಮಾಡಲಾಯಿತು.**



ಸೋಮವಾರ ಬೆಳಿಗ್ಗೆ 9:00 ಘಂಟೆಯಿಂದ ಆರಂಭವಾದ ಈ ಮಹಾಪ್ರಸಾದ ಸೇವಾ ಕಾರ್ಯಕ್ರಮಕ್ಕೆ ಡಾ.ಪ್ರಭುಗೌಡ ಲಿಂಗದಳ್ಳಿ ಅಭಿಮಾನಿ ಬಳಗದ ಮುಖ್ಯಸ್ಥ ಶಿವಕುಮಾರ ದೇಸಾಯಿ ಹಾಗೂ ಸ್ಥಳೀಯ ಅನುಗ್ರಹ ಕಣ್ಣಿನ ಆಸ್ಪತ್ರೆ ವ್ಯವಸ್ಥಾಪಕ ಮಲ್ಲನಗೌಡ ಬಿರಾದಾರ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಕಳೆದ ಐದು ವರ್ಷಗಳಿಂದ ಡಾ. ಪ್ರಭುಗೌಡರ ಅಭಿಮಾನಿ ಬಳಗದಿಂದ ಅಜ್ಜನ ಜಾತ್ರೆಗೆ ಬರುವ ಭಕ್ತರಿಗೆ ವಿಶೇಷ ಪ್ರಸಾದ ವ್ಯವಸ್ಥೆಯನ್ನು ಮಾಡಿಕೊಂಡು ಬರಲಾಗುತ್ತಿದೆ. ಈ ಬಾರಿ ಸುಮಾರು ಏಳು ಸಾವಿರ ಭಕ್ತರಿಗೆ ಆಗುವಷ್ಟು ವಿಶೇಷ ಆಹಾರ ಪದಾರ್ಥಗಳಾದ ಕೇಸರಿಬಾತು ಹಾಗೂ ಪಲಾವ್ ಸಿದ್ಧಪಡಿಸಲಾಗಿದೆ. ಭಕ್ತರು ದಯವಿಟ್ಟು ಶಾಂತರೀತಿಯಿಂದ ಪ್ರಸಾದವನ್ನು ಸ್ವೀಕರಿಸಿಕೊಂಡು ಹೋಗಬೇಕೆಂದು ನಾವು ಕೇಳಿಕೊಳ್ಳುತ್ತೇವೆ. ಬಳಗದ ಈ ಎಲ್ಲಾ ಸೇವಾ ಕಾರ್ಯಗಳು ಡಾ.ಪ್ರಭುಗೌಡರ ಮಾರ್ಗದರ್ಶನದಲ್ಲಿಯೇ ನಡೆಯುತ್ತಿವೆ ಎಂದರು. ಈ ಸಮಯದಲ್ಲಿ ಡಾ.ನಜೀರ ಅಹ್ಮದ ಕೋಲ್ಯಾಳ,ನಿಂಗನಗೌಡ ಬಿರಾದಾರ, ಬಾಲು ಅಸ್ಕಿ, ಮಲ್ಲನಗೌಡ ದ್ಯಾಪೂರ, ಮಹಾಂತೇಶ ಹುಜರಾತಿ ಹಾಗೂ ಅನುಗ್ರಹ ಆಸ್ಪತ್ರೆಯ ಸಿಬ್ಬಂದಿಗಳು ಮತ್ತಿತರರು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕಾರ್ಗಿಲ್ ವಿಜಯೋತ್ಸವ ಮತ್ತು ಹುತಾತ್ಮ ಯೋಧರಿಗೆ ಮೌನಾಚರಣೆ.

ನೈಜ್ಯ ದೆಸೆ ನ್ಯೂಸ್

**ಕಾರ್ಗಿಲ್ ತಾವು ಅಂದುಕೊಂಡ ಹಾಗೆ ಆರಾಮದಾಯಕ ಗಡಿ ರಕ್ಷಣೆಯ ಸ್ಥಳವಲ್ಲ ಇಲ್ಲಿನ ಆಳ ಪ್ರಪಾತಗಳು ಜೂನ್ ಜುಲೈ ತಿಂಗಳ ವಿಪರೀತ ಶೀತದ ಚಳಿ ಇದರ ಮದ್ಯೆ ದ್ರೋಹ ಬಗೆದ ಗಡಿತಾಗಿದ ದೇಶ ಪಾಪಿ ಪಾಕಿಸ್ತಾನಿಗಳು ನಮ್ಮ ಬಂಕರ್ ಹತ್ತಿ ನಮ್ಮ ಮೇಲೆ ಗುಂಡಾರಿಸುವ ಅನುಭವ ಕಾರ್ಗಿಲ್ ನಲ್ಲಿ ನಾ ಕಂಡಿದ್ದೇನೆ ರಾಷ್ಟ್ರ ರಕ್ಷಣೆಗೆ ನಾವು ಸದಾ ಸಿದ್ದತೆಯೊಂದಿಗೆ ಬದುಕುವುದು ಸರ್ವಸಮಾನ್ಯವಾಗಿತ್ತು ಎಂದು ಮಾಜಿ ಸೈನಿಕ ಬಸವರಾಜ ಮುಷ್ಠೂರ ಹೇಳಿದರು.**



ಸ್ವಾಭಿಮಾನಿ ಯುವ ಬಳಗ ಮಾನವಿ ಮತ್ತು ವಂದೇ ಮಾತರಂ ಯುವ ಸಂಘ (ರಿ) ಮದ್ಲಾಪುರ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಮಾನವಿಯ ದಿ. ಮಂಜುನಾಥ ಪುತ್ಥಳಿ ಕಾರ್ಯಕ್ರಮ ಯಲ್ಲಿ ಮಾಡಿ ಹುತಾತ್ಮ ಯೋಧರಿಗೆ ಮೇಣದ ಬತ್ತಿ ಹಚ್ಚಿ ಮೌನಾಚಣೆ ಮಾಡಿ ಮಾಜಿ ಸೈನಿಕ ಸಂಘದ ಅಧ್ಯಕ್ಷ ಬಸವರಾಜ ಮುಸ್ಟೂರ, ಆಂಜನೇಯ ಜಲ್ಲಿ ನೀರಮಾನವಿ ಮತ್ತು ಹಾಲಿ ಅಗ್ನಿವೀರ ಆರ್ಮಿ ಅಮರೇಶ ಮದ್ಲಾಪುರ ರವರುಗಳಿಗೆ ಸನ್ಮಾನಿಸಲಾಯಿತು.

ಪ್ರಾಸ್ತಾವಿಕದಲ್ಲಿ ವಂದೇ ಮಾತರಂ ಸಂಘದ ಅಧ್ಯಕ್ಷ ಮಹಿಬೂಬ್ ಮದ್ಲಾಪುರ ಮಾತನಾಡಿ "ಸಂವಿಧಾನದಲ್ಲಿನ ನಮಗೆ ಹಕ್ಕು ಎಷ್ಟು ಮುಖ್ಯನೋ, ಹುತಾತ್ಮ ಯೋಧರನ್ನು ಸ್ಮರಿಸುವ ಕರ್ತವ್ಯ ಅಷ್ಟೇ ಮುಖ್ಯ. ಈ ವಿಜಯೋತ್ಸವಕ್ಕೆ ಕಾರಣಿಕರ್ತರು ಯೋಧರು, ನಮ್ಮ ದೇಶದ ಗಡಿ ರಕ್ಷಕರು ನಮ್ಮನ್ನು ಕಾಪಾಡುತ್ತಿದ್ದಾರೆ, ಯುವಕರು ಸೈನಿಕ ವೃತ್ತಿಗೆ ಸೇರುವ ಉತ್ಸಾಹಿಗಳಾಗಲಿ ಸಾದ್ಯವಾಗದಿದ್ದರೂ ದೇಶದ ಒಳಗಡೆ ಸಮಾಜದ ಸೈನಿಕರಾಗೋಣ ಹಲವಾರು ಬದಲಾವಣೆ ತರುವುದು ಅವಶ್ಯಕತೆ ಇದೆ ಭ್ರಷ್ಟಾಚಾರ, ಮೂಢನಂಬಿಕೆ, ಜಾತೀಯತೆ, ಅನೈತಿಕ ಚಟುವಟಿಕೆಗಳು ಮತ್ತು ದುಶ್ಚಟಗಳುನ್ನು ಬೇರು ಸಮೇತ ಕಿತ್ತಬೇಕಿದೆ" ಎಂದರು.

ಮಾಜಿ ಯೋಧ ಆಂಜನೇಯ ಜಲ್ಲಿ ಮಾತನಾಡುತ್ತಾ "ಗಡಿಯಲ್ಲಿ ಸೈನಿಕರಾಗದಿದ್ದರೂ ದೇಶದ ಒಳಗಡೆ ಎಷ್ಟೋ ಕೆಟ್ಟ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರನ್ನು ಕಾಣುತ್ತಿದ್ದರೆ ನಮಗೆ ಗಡಿಯೇ ಲೇಸು ಎಂದೆನಿಸುತ್ತದೆ. ಸೈನಿಕರ ಬಗೆಗಿನ ನಿಶಕಾಳಜಿ ಸರ್ಕಾರ್ ಜೀರ್ಣೋದ್ದಾರ ಇಲ್ಲ, ಜಯಂತಿಗಳಿಗೆ ಇದ್ದ ಬೆಲೆ ರಾಷ್ಟ್ರ ರಕ್ಷಕ ಸೈನಿಕನಿಗೆ ಯುವಕರು ಕೊಡುವಷ್ಟು ಗೌರವ ನಾಯಕರು ಮುಖಂಡರು ನೀಡುತ್ತಿಲ್ಲ ಎಂದು ಬೇಸರ" ಎಂದರು.

ಅಗ್ನಿವೀರ್ ಅಮರೇಶ ಮದ್ಲಾಪುರ ಮಾತನಾಡುತ್ತಾ"ಇವತ್ತಿನ ಯುವಕರು ಮೊಬೈಲ್ ಅಡಿಕ್ಷನ್, ಬೆಟ್ಟಿಂಗ್, ದುಶ್ಚಟಗಳಿಗೆ ಬಲಿಯಾಗುತ್ತಿರುವುದು ದುರಂತ ನಾನು ಸೈನ್ಯಕ್ಕೆ ಸೇರಿ ಸೇವೆ ಸಲ್ಲಿಸುವ ಸೌಭಾಗ್ಯ ತೊರೆತದರಲ್ಲಿ ಗೌರವ ಮತ್ತು ಆಪರೇಷನ್ ಸಿಂಧೂರ್ ನಲ್ಲಿ ಶತ್ರುಗಳ ಮೇಲೆ ಗುಂಡಾರಿಸಿದೆ ಎಂಬ ತೃಪ್ತಿ ಇದೆ ಬದುಕು ಹೇಗಾದರೂ ಆಗಬಾರದು ಅನ್ಕೊಂಡಿರೋ ಹಾಗೆ ಸಾಗಬೇಕು ನಮ್ಮ ಸಾವಿಗೆ ಸರ್ಕಾರ ರಾಷ್ಟ್ರ ಧ್ವಜ ಹಾಕಿ ಸರ್ಕಾರಿ ಮಾರ್ಯಾದೆಯೊಂದಿಗೆ ಸಾಲ್ಯೂಟ್ ಮಾಡಬೇಕು ಈ ಜೀವನಕ್ಕೆ ನಾವೆಲ್ಲ ಪಾಲುಗಾರರಾಗೋಣ ಎಂದರು.

ಬಳಗ ಮತ್ತು ಸಂಘದ ಮಹೇಶ್ ನಾಯಕ ಬೆಟ್ಟದೂರು, ಎಚ್.ಬಿ.ಎಂ. ಭಾಷ, ಕೆ.ಎಂ. ಭಾಷ, ಮದ್ಲಾಪೂರಿನ ಬಾಲಪ್ಪ, ಸ್ವಾಮಿ, ಸಂದೀಪ್, ವಿಶ್ವನಾಥ್, ವೆಂಕಟೇಶ್ ಮುಸ್ತಾಕ್ ಗುರು, ವೀರೇಶ್ ನಾಯಕ, ನರಸಿಂಹ, ಜಗ್ಗು ಸಿ, ವಿಜಯ್ ಹೂಗಾರ್ ಮತ್ತು ಸ್ನೇಹಿತರು ಹಾಗೂ ಯುವಕರು ಉಪಸ್ಥಿತ್ತರು.

# ನಮ್ಮ ಗ್ರೋಮೋರ್ ಕೇಂದ್ರಕ್ಕೆ ನೋಟಿಸ್ ಜಾರಿ

## ಯೂರಿಯಾ ಜತೆಗೆ ಇತರ ರಸಗೊಬ್ಬರ ಖರೀದಿಗೆ ಒತ್ತಡ ಆರೋಪ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಯೂರಿಯಾ ಗೊಬ್ಬರದ ಜತೆ ಇತರ ರಸಗೊಬ್ಬರ ಕಡ್ಡಾಯವಾಗಿ ಖರೀದಿಸಲು ರೈತರಿಗೆ ಒತ್ತಡ ಹಾಕುತ್ತಿದ್ದಾರೆ ಎಂಬ ಆರೋಪದ ಮೇರೆಗೆ ಪಟ್ಟಣದ ನಮ್ಮ ಗ್ರೋಮೋರ್ ರಸಗೊಬ್ಬರ, ಎಣ್ಣೆ, ಬೀಜ ಮಾರಾಟ ಕೇಂದ್ರಕ್ಕೆ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಅಮರೇಶ ಬಿರಾದಾರ ಶನಿವಾರ ದಾಳಿ ನಡೆಸಿ, ಷೋಕಾಸ್ ನೋಟಿಸ್ ನೀಡಿದ್ದಾರೆ.**




ರಸಗೊಬ್ಬರ ನಿಯಂತ್ರ ಕಾಯ್ದೆ ನಿಯಮಗಳನ್ನು ಉಲ್ಲಂಘನೆ ಮಾಡಿದ್ದು, ರಸಗೊಬ್ಬರ ಮಾರಾಟ ಮಾಡುವುದನ್ನು ರದ್ದು ಪಡಿಸುವುದಾಗಿ ಎಚ್ಚರಿಕೆ ನೀಡಿ, ಏಳು ದಿನಗಳ ಒಳಗಾಗಿ ನೋಟಿಸ್‌ಗೆ ಉತ್ತರ ನೀಡಬೇಕು ಎಂದು ಕೃಷಿ ಅಧಿಕಾರಿ ಸೂಚಿಸಿದರು.

ಇದೇ ವೇಳೆ ರೈತ ಸಂಘದ ತಾಲೂಕು ಅಧ್ಯಕ್ಷ ಹರ್ಷವರ್ಧನ ನಾಯಕ ದೊರೆ ಮಾತನಾಡಿ, ರೈತರ ಅನುಕೂಲಕ್ಕಾಗಿ ಕಾರ್ಯನಿರ್ವಹಿಸಬೇಕಾದ ನಮ್ಮ ಗ್ರೋಮೋರ್ ಎಣ್ಣೆ, ಬೀಜ ಹಾಗೂ ರಸಗೊಬ್ಬರ ಮಾರಾಟ ಕೇಂದ್ರದಲ್ಲಿ ರೈತರಿಗೆ ಯೂರಿಯಾ ಮಾತ್ರ ನೀಡದೆ ಅದರೊಂದಿಗೆ ಭಾರತ್ ಎನ್‌ಪಿಕೆ 20:20:0:13 ಸೇರಿದಂತೆ ಲಭ್ಯವಿರುವ ಇತರ ರಸಗೊಬ್ಬರಗಳಲ್ಲಿ ಒಂದನ್ನು ಕಡ್ಡಾಯವಾಗಿ ಖರೀದಿಸಬೇಕು ಎಂದು ಒತ್ತಾಯಿಸುತ್ತಿದ್ದರು.

ಬೇಡ ಎಂದರೆ ಯೂರಿಯಾ ನೀಡುತ್ತಿರಲಿಲ್ಲ. ಹೀಗಾಗಿ ರೈತರು ಅನಿವಾರ್ಯವಾಗಿ ಅಗತ್ಯವಿಲ್ಲದ ರಸಗೊಬ್ಬರ ಖರೀದಿಸಬೇಕಾಗಿತ್ತು ಎಂದು ಆರೋಪಿಸಿದರು. ಸಂಘದ ಉಪಾಧ್ಯಕ್ಷ ಹನುಮಗೌಡ ಚಡಕಲಗುಡ್ಡ, ಸದಸ್ಯರಾದ ಶರಣಪ್ಪ, ಯಂಕೋಬ ಖಾನಾಪುರ, ರೈತ ಮಹಾದೇವ ಜಲ್ಲೆ ಇದ್ದರು.

# ದಮ್ಮೂರು ಗ್ರಾಮದಲ್ಲಿ ಬೃಹತ್ ರಕ್ತದಾನ ಶಿಬಿರ : 105 ಯೂನಿಟ್ ರಕ್ತ ಸಂಗ್ರಹ



ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕುರುಗೋಡು : ದಮ್ಮೂರು ಗ್ರಾಮದಲ್ಲಿ ಅರೋಗ್ಯ ಇಲಾಖೆ, ಗ್ರಾಮದ ಎಲ್ಲಾ ಸಂಘ ಸಂಸ್ಥೆಗಳ ಹಾಗೂ ಸ್ಪಂದನ ರಕ್ತನಿಧಿ ಕೇಂದ್ರ ಬಳ್ಳಾರಿ, ಇವರ ಸಹಯೋಗದಲ್ಲಿ ಗ್ರಾಮದ ಸಂಕ್ಲಮ್ಮ ಗುಡಿಯ ಆವರಣದಲ್ಲಿ ಬೃಹತ್ ರಕ್ತದಾನ ಶಿಬಿರ ಜರುಗಿತು. ಪ್ರಾಥಮಿಕ ಆರೋಗ್ಯ ಕೇಂದ್ರ ಕೋಳೂರುನ ವೈದ್ಯಾಧಿಕಾರಿಗಳಾದ ಡಾ. ಚಾಮಲಿ ಗುರುಬಸವರಾಜ್ ಮಾತನಾಡಿ, ರಕ್ತವು ಜೀವರಕ್ಷಕವಾಗಿದ್ದು, ರಕ್ತದಾನ ಕಾರ್ಯಕ್ರಮಗಳಲ್ಲಿ ಸ್ವಯಂ ಪ್ರೇರಿತವಾಗಿ ಭಾಗವಹಿಸುವ ಮೂಲಕ ಮತ್ತೊಬ್ಬರ ಬಾಳಿನ ರಕ್ಷಕರಾಗಬಹುದು' ಎಂದು ಹೇಳಿದರು.

ಈ ಸಂದರ್ಭದಲ್ಲಿ ಅರೋಗ್ಯ ಇಲಾಖೆಯ ಕರಿಬಸವ ಎನ್. ಶರಣಬಸವ, ಕೆ.ವೀರೇಶ್, ಶ್ರೀಮತಿ ರೇಖಾ,ಹೆಚ್. , ಶೈಲಜಾ ಎನ್, ಭರತ್ ಕುಮಾರ್, ಸ್ಪಂದನ ಬ್ಲಡ್ ಬ್ಯಾಂಕ್ ನ ಡಾ. ಪ್ರಕಾಶ್ ಪಾಟೀಲ್, ಮಹೇಶ್ ಹೆಚ್, ಆಶಾ ಕಾರ್ಯಕರ್ತೆ ಕೆ.ಪರಿಮಳ,- ಅಂಗನವಾಡಿ ಕಾರ್ಯಕರ್ತೆಯರಾದ ಸಿಂಧು, ನೇತ್ರಾ, ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವರ್ಗ ಮತ್ತು ಸಿಬ್ಬಂದಿ ವರ್ಗ, ಊರಿನ ಯುವಕರು ಮುಖಂಡರು, ಹಿರಿಯರು, ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

# ಮಳೆಗಾಗಿ ಪ್ರಾರ್ಥಿಸಿ ಅಖಂಡ ಭಜನೆ ಹಾಗೂ ಹೋಮ ಹವನ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲ್ಲೂಕಿನ ಸಣಾಪುರ ಗ್ರಾಮದ ಆರಾಧ್ಯ ದೇವರಾದ ಲಿಂಗರೂಪಿ ಶ್ರೀ ಉದ್ಬವ ವೀರಭದ್ರೇಶ್ವರ ದೇಗುದಲ್ಲಿ 24 ಗಂಟೆಗಳ ಕಾಲ ಅಖಂಡ ಭಜನೆ ಕಾರ್ಯಕ್ರಮ ಹಾಗೂ ಹೋಮ ಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.**



ಜು.26 ರಂದು ಶ್ರೀ ಉದ್ಬವ ವೀರಭದ್ರೇಶ್ವರ ಸ್ವಾಮಿಗೆ ವಿವಿಧ ಅಭೀಷೇಕಗಳನ್ನು ಮಾಡಿದ ನಂತರ ಸಣಾಪುರ ಗ್ರಾಮದ ಶ್ರೀ ವೀರಭದ್ರೇಶ್ವರ ಭಜನಾ ಮಂಡಳಿಯ ಸದಸ್ಯರು 24 ಗಂಟೆಗಳ ಅಖಂಡ ಭಜನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. 24 ಗಂಟೆಗಳ ನಿರಂತರ ಭಜನಾ ಕಾರ್ಯಕ್ರಮದಲ್ಲಿ ಮೂರು ಗ್ರಾಮಗಳಾದ ಸಣಾಪುರ,ಗುತ್ತಿಗನೂರು ಮತ್ತು ಮುಸ್ಟೂರು ಗ್ರಾಮದ ಭಜನಾ ಮಂಡಳಿಗಳು ಭಾಗವಹಿಸಿದ್ದು, ಜು.26 ರಂದು ಬೆಳಿಗಿನಿಂದ 27ರ ಸೋಮವಾರ ಬೆಳಗಿನ 6 ಗಂಟೆಯರವರೆಗೆ ನಿರಂತರವಾಗಿ ಒಂದೂರಾದ ನಂತರ ಒಂದು ಊರಿನವರು ಭಕೆನ ಕಾರ್ಯಕ್ರಮ ನಡೆಸಲಿದ್ದಾರೆ.

ಜು.27 ರಂದು ಸೋಮವಾರ ಭಜನೆ ಕಾರ್ಯಕ್ರಮ ಮುಗಿದ ನಂತರ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಅಭಿಷೇಕಗಳನ್ನು ಮಾಡಿದ ನಂತರ ಚಿನ್ನ ಮತ್ತು ಬೆಳ್ಳಿಯ ಆಭರಣಗಳಿಂದ, ವಿವಿಧ ಹೂಗಳಿಂದ ಅಲಂಕರಿಸಿ ಪೂಜಿಸಿದರು. ನಂತರ ದೇವಸ್ಥಾನದ ಆವರಣದಲ್ಲಿ ವಿವಿಧ ಹೋಮ ಹವನಗಳು ಜರುಗಲಿವೆ. ನಂತರ ಮಹಾಮಂಗಳಾರತಿ ನೆರವೇರಿಸಿ ಮಳೆಗಾಗಿ ಪ್ರಾರ್ಥಿಸಲಿದ್ದಾರೆ. ನಂತರ ಮಹಾ ಪ್ರಸಾದ ವಿತರಣೆ ಜರುಗಲಿದೆ. ಇಂದಿನ ಅಖಂಡ ಭಜನಾ ಕಾರ್ಯಕ್ರಮದಲ್ಲಿ ದೇಗುಲ ಸಮಿತಿಯ ಪದಾಧಿಕಾರಿಗಳು, ವಿವಿಧ ಗ್ರಾಮಗಳ ಸದ್ಭಕ್ತರು ಭಾಗವಹಿಸಿದ್ದರು.

# ಸರ್ವ ಸಮಾಜದ ಪ್ರೀತಿಯ ಕಾರುಣ್ಯ ಆಶ್ರಮವು ನಮ್ಮ ಸಿಂಧನೂರಿಗೆ ಗೌರವ ತಂದಿದೆ - ಮರಿಯಪ್ಪ ಬಂಡಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಹುಬ್ಬಳ್ಳಿ ನಗರ ನಿವಾಸಿಗಳಾದ ರೇಖಾ ಹಿರೇಮಠ ಫಕೀರಯ್ಯ ಸ್ವಾಮಿ ಹಿರೇಮಠ ಈ ದಂಪತಿಗಳ ಮಗನಾದ ಬೆನಕ ಗೋಲ್ಡ್ ಲೋನ್ ಹುಬ್ಬಳ್ಳಿ ಶಾಖೆಯ ವ್ಯವಸ್ಥಾಪಕರಾದ ಆನಂದ ಹಿರೇಮಠ ಅವರ ಜನ್ಮ ಸಾರ್ಥಕ ದಿನ ಸಮಾರಂಭ ಕಾರ್ಯಕ್ರಮವು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಇಡೀ ದಿನದ ಮಹಾಪ್ರಸಾದ ಸೇವೆ ಹಾಗೂ ಹಣ್ಣುಗಳು ನ ವಿತರಿಸುವ ಮೂಲಕ " ನಿಮ್ಮೊಂದಿಗೆ ನಾವಿದ್ದೇವೆ" ಎನ್ನುವ ವಿಶೇಷ ಕಾರ್ಯಕ್ರಮದಡಿಯಲ್ಲಿ ಅರ್ಥಪೂರ್ಣವಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಆನಂದ್ ಹಿರೇಮಠ ಹಾಗೂ ಪಾರ್ವತಿ ಹಿರೇಮಠ ಈ ದಂಪತಿಗಳನ್ನು ಸನ್ಮಾನಿಸಿ ಗೌರವಿಸಿ



ಕರುನಾಡಿನ ಕಾರುಣ್ಯ ಕರುಣಾಮಯಿ ಎನ್ನುವ ಶ್ರೇಷ್ಠ ಬಿರುದಿನೊಂದಿಗೆ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಕೆ. ಎಸ್. ಸಿ. ಡಬ್ಲ್ಯು ಸಿ. ಸಿ. ತಾಲೂಕ ಅಧ್ಯಕ್ಷರು ಹಾಗೂ ಭೋವಿ ಸಮಾಜದ ಮಾಜಿ ತಾಲೂಕಾಧ್ಯಕ್ಷರಾದ ಮರಿಯಪ್ಪ ಬಂಡಿ ಮಾತನಾಡಿ ಸುಮಾರು 40 ವರ್ಷಗಳಿಂದ ನಾನು ಹರೇಟನೂರಿನ ಅಮರಯ್ಯ ಸ್ವಾಮಿಯವರ ಉತ್ತಮ ಸ್ನೇಹಿತನಾಗಿದ್ದು ಇಂದು ಅವರು ಹುಟ್ಟು ಹಾಕಿದ ಕಾರುಣ್ಯ ಕುಟುಂಬ ಅವರ ಸಾಧನೆ ನನಗೆ ಹೆಮ್ಮೆಯ ವಿಷಯವಾಗಿದೆ. ಸರ್ವ ಸಮಾಜದ ಪ್ರೀತಿಯ ಕಾರುಣ್ಯ ಆಶ್ರಮವು ನಮ್ಮ ಸಿಂಧನೂರಿಗೆ ಗೌರವ ತಂದಿದೆ. ನಮ್ಮ ಸ್ನೇಹಿತರಾದ ಹರೇಟನೂರಿನ ಅಮರಯ್ಯ ಸ್ವಾಮಿ ಅಂದ ಅನಾಥರ ಬಾಳಿಗೆ ಬೆಳಕಾಗಿದ್ದಾರೆ. ಕೇವಲ ಒಬ್ಬ ಬಡ ಜಂಗಮನಾಗಿ ನಿರಂತರ ಜೋಳಿಗೆಯ ಕಾಯಕದೊಂದಿಗೆ ಬದುಕು ಕಟ್ಟಿಕೊಂಡಿದ್ದ ಅಮರಯ್ಯ ಸ್ವಾಮಿ ತನ್ನ ಜೋಳಿಗೆಯ ಮೂಲಕ ಅದೆಷ್ಟು ಅಂದ ಅನಾಥರಿಗೆ ಹಸಿವು ನೀಗಿಸುತ್ತಿರುವುದು.

ಮಾನವೀಯತೆಗೆ ಮೆರುಗು ತಂದಿದೆ. ನಾನು ಹಾಗೂ ನಮ್ಮ ಸಮಾಜ ಹಾಗೂ ನನ್ನೆಲ್ಲಾ ಕುಟುಂಬ ಯಾವಾಗಲೂ ಕಾರುಣ್ಯ ಆಶ್ರಮದ ಜೊತೆಗಿರುತ್ತದೆ ಎಂದು ಭಾವನಾತ್ಮಕವಾಗಿ ಮಾತನಾಡಿದರು. ನಂತರ ಹುಬ್ಬಳ್ಳಿ ಶಾಖೆಯ ಬೆನಕ ಗೋಲ್ಡ್ ಲೋನ್ ವ್ಯವಸ್ಥಾಪಕರಾದ ಆನಂದ್ ಹಿರೇಮಠ ಮಾತನಾಡಿ ಇಂದು ನನ್ನ ಜನ್ಮದಿನ ಅನ್ನುವುದಕ್ಕಿಂತ ನನ್ನ ಜನ್ಮ ಸಾರ್ಥಕ ದಿನವಾಗಿದೆ. ನಾನು ಅದೆಷ್ಟೋ ಆಶ್ರಮಗಳನ್ನು ನೋಡಿದ್ದೇನೆ ಆದರೆ ಪ್ರೀತಿ ಸ್ನೇಹ ಸಂಬಂಧ ಮಮತೆ ಇವೆಲ್ಲವುಗಳನ್ನು ಕಾಣಬೇಕಾದರೆ ಕಾರುಣ್ಯ ಆಶ್ರಮಕ್ಕೆ ಒಮ್ಮೆ ಭೇಟಿ ನೀಡಬೇಕು. ಕಾರುಣ್ಯಾಶ್ರಮದಲ್ಲಿನ ಈ ಸೇವೆ ನನ್ನ ಜನ್ಮ ಸಾರ್ಥಕವಾಗಿದೆ. ಎಂದೆನಿಸಿದೆ. ಜಂಗಮ ಸಂಸ್ಕೃತಿ ಸಂಸ್ಕಾರವನ್ನು ಉಳಿಸಿದ ಕೀರ್ತಿ ಕಾರುಣ್ಯ ಸಂಸ್ಥೆಯ ಸಂಸ್ಥಾಪಕರಿಗೆ ಸಲ್ಲುತ್ತದೆ ಎಂದು ಮಾತನಾಡಿ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶರಣಮ್ಮ. ಪಾರ್ವತಿ ಹಿರೇಮಠ ಹುಬ್ಬಳ್ಳಿ. ಸರಸ್ವತಿ. ವಿಜಯಮ್ಮ.

ದಕ್ಷಿಣಾಮೂರ್ತಿ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಹಾಗೂ ಹುಬ್ಬಳ್ಳಿಯ ಹಿರೇಮಠ ಕುಟುಂಬದ ಅನೇಕರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂ.ಎಸ್ಸಿ. ಕೃಷಿ (M.Sc. Agriculture)

ಎಂ.ಎಸ್ಸಿ. ಕೃಷಿ (Master of Science in Agriculture) ಎನ್ನುವುದು ಕೃಷಿ ವಿಜ್ಞಾನದಲ್ಲಿ ಉನ್ನತ ಮಟ್ಟದ ಜ್ಞಾನ, ಸಂಶೋಧನಾ ಕೌಶಲ್ಯ ಮತ್ತು ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಕಲಿಸುವ 2 ವರ್ಷಗಳ (4 ಸೆಮಿಸ್ಟರ್‌ಗಳು) ಸ್ನಾತಕೋತ್ತರ ಪದವಿ ಕೋರ್ಸ್ ಆಗಿದೆ. ಈ ಕೋರ್ಸ್ ಕೃಷಿ ಕ್ಷೇತ್ರದಲ್ಲಿ ಸಂಶೋಧನೆ, ಬೋಧನೆ, ಸರ್ಕಾರಿ ಸೇವೆ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಉನ್ನತ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ.

ಕೋರ್ಸ್ ಮುಖ್ಯಾಂಶಗಳು

ಕೋರ್ಸ್ ಹೆಸರು: ಎಂ.ಎಸ್ಸಿ. ಕೃಷಿ (M.Sc. Agriculture)

ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು)

ಅರ್ಹತೆ: ಬಿ.ಎಸ್ಸಿ. ಕೃಷಿ (B.Sc. Agriculture) ಅಥ–ವಾ ತತ್ಸಮಾನ ಪದವಿಯಲ್ಲಿ ಕನಿಷ್ಠ 50% ಅಂಕಗಳು (ವಿಶ್ವವಿದ್ಯಾಲಯದ ನಿಯಮಾನುಸಾರ ವ್ಯತ್ಯಾಸ ಇರಬಹುದು)

ಪ್ರವೇಶ ವಿಧಾನ: ಖಅಂಖ ಂಖಇಇಂ (ಕಉ) ಪ್ರವೇಶ ಪರೀಕ್ಷೆ, ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆ ಅಥವಾ ಮೆರಿಟ್ ಆಧ–ಾರಿತ ಪ್ರವೇಶ

ಕಲಿಕೆಯ ವಿಧಾನ: ಸಿದ್ಧಾಂತ, ಪ್ರಯೋಗಾಲಯ, ಕ್ಷೇತ್ರ ಅಧ್ಯಯನ, ಸಂಶೋಧನಾ ಪ್ರಾಜೆಕ್ಟ್ ಹಾಗೂ ಪ್ರಬಂಧ (Thesis)

ಪ್ರಮುಖ ವಿಶೇಷತೆಗಳು (Specializations)

- ಕೃಷಿಶಾಸ್ತ್ರ (Agronomy)
- ಮಣ್ಣು ವಿಜ್ಞಾನ (Soil Science)
- ಸಸ್ಯ ರೋಗಶಾಸ್ತ್ರ (Plant Pathology)
- ಜಂತುಶಾಸ್ತ್ರ/ಕೀಟಶಾಸ್ತ್ರ (ENTOMOLOGY)
- ತೋಟಗಾರಿಕೆ (Horticulture)
- ಸಸ್ಯ ಶರೀರಶಾಸ್ತ್ರ (Plant Physiology)
- ಕೃಷಿ ವಿಸ್ತರಣಾ ಶಿಕ್ಷಣ (Agricultural Extension)
- ಕೃಷಿ ಅರ್ಥಶಾಸ್ತ್ರ (Agricultural Economics)
- ಜಿನಶಾಸ್ತ್ರ ಮತ್ತು ಸಸ್ಯ ಸಂತಾನೋತ್ಪತ್ತಿ (Genetics and Plant Breeding)
- ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ (Seed Science and Technology)

ಕೋರ್ಸ್‌ನಲ್ಲಿ ಕಲಿಯುವ ವಿಷಯಗಳು

- ಸುಧಾರಿತ ಬೆಳೆ ಉತ್ಪಾದನಾ ತಂತ್ರಜ್ಞಾನ
- ಮಣ್ಣಿನ ಫಲವತ್ತತೆ ಮತ್ತು ಪೋಷಕಾಂಶ ನಿರ್ವಹಣೆ
- ಜೈವಿಕ ಕೃಷಿ ಮತ್ತು ಸುಸ್ಥಿರ ಕೃಷಿ
- ಕೀಟ ಹಾಗೂ ರೋಗ ನಿರ್ವಹಣೆ
- ಹವಾಮಾನ ಬದಲಾವಣೆ ಮತ್ತು ಕೃಷಿ
- ಕೃಷಿ ಸಂಶೋಧನಾ ವಿಧಾನಗಳು
- ಅಂಕಿಅಂಶ ವಿಶ್ಲೇಷಣೆ (Biostatistics)
- ಕೃಷಿ ನೀತಿಗಳು ಮತ್ತು ಯೋಜನೆಗಳು

ಅಗತ್ಯ ಕೌಶಲ್ಯಗಳು

- ಸಂಶೋಧನಾ ಮನೋಭಾವ
- ವಿಶ್ಲೇಷಣಾತ್ಮಕ ಚಿಂತನೆ
- ಸಮಸ್ಯೆ ಪರಿಹಾರ ಕೌಶಲ್ಯ
- ಕ್ಷೇತ್ರ ಕಾರ್ಯ ನಿರ್ವಹಣೆ
- ತಂಡದೊಂದಿಗೆ ಕೆಲಸ ಮಾಡುವ ಸಾಮರ್ಥ್ಯ
- ಸಂವಹನ ಮತ್ತು ವರದಿ ಬರವಣಿಗೆ ಕೌಶಲ್ಯ

ಉದ್ಯೋಗಾವಕಾಶಗಳು

- ಕೃಷಿ ವಿಜ್ಞಾನಿ (Agricultural Scientist)
- ಕೃಷಿ ಅಧಿಕಾರಿ (Agricultural Officer)
- ಸಂಶೋಧನಾ ವಿಜ್ಞಾನಿ (Research Scientist)
- ಫಾರ್ಮ್ ಮ್ಯಾನೇಜರ್ (Farm Manager)
- ಕೃಷಿ ವಿಸ್ತರಣಾ ಅಧಿಕಾರಿ
- ಬೀಜ ಕಂಪನಿಗಳ ತಾಂತ್ರಿಕ ಅಧಿಕಾರಿ
- ರಸಗೊಬ್ಬರ ಮತ್ತು ಕೀಟನಾಶಕ ಕಂಪನಿಗಳ ತಜ್ಞ
- ಕೃಷಿ ಸಲಹೆಗಾರ (Agricultural Consultant)
- ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಕ (ಅಗತ್ಯ ಅರ್ಹತೆಗಳೊಂದಿಗೆ)

ಉದ್ಯೋಗ ನೀಡುವ ಪ್ರಮುಖ ಸಂಸ್ಥೆಗಳು

- ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಖಅಂಖ)
- ಕೃಷಿ ವಿಜ್ಞಾನ ಕೇಂದ್ರಗಳು (KVK)
- ರಾಜ್ಯ ಕೃಷಿ ಇಲಾಖೆ
- NABARD
- FCI
- IFFCO
- KRIBHCO
- ಖಾಸಗಿ ಬೀಜ, ರಸಗೊಬ್ಬರ ಮತ್ತು ಕೃಷಿ ತಂತ್ರಜ್ಞಾನ ಕಂಪನಿಗಳು
- ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳು

ಉನ್ನತ ಶಿಕ್ಷಣದ ಅವಕಾಶಗಳು

- ಪಿಎಚ್.ಡಿ. (Ph.D. Agriculture)
- NET ಪರೀಕ್ಷೆ ಮೂಲಕ ಬೋಧನಾ ಕ್ಷೇತ್ರ
- JRF/SRF ಸಂಶೋಧನಾ ಫೆಲೋಶಿಪ್
- ವಿದೇಶಗಳಲ್ಲಿ ಉನ್ನತ ಅಧ್ಯಯನ ಮತ್ತು ಸಂಶೋಧನೆ

ಸಂಬಳ

ಆರಂಭಿಕ ಹಂತ: 4 ಲಕ್ಷ 8 ಲಕ್ಷ ವಾರ್ಷಿಕ (ಸಂಸ್ಥೆ ಮತ್ತು ಹುದ್ದೆಯನ್ನು ಅವಲಂಬಿಸಿ)

ಅನುಭವದ ನಂತರ: 8 ಲಕ್ಷ 15 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ವಾರ್ಷಿಕ

ಕರ್ನಾಟಕದ ಪ್ರಮುಖ ಕೃಷಿ ವಿಶ್ವವಿದ್ಯಾಲಯಗಳು

- ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ (UAS), ಬೆಂಗಳೂರು
- ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ (UAS), ಧಾರವಾಡ
- ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಅಂಡ್ ಹಾರ್ಟಿಕಲ್ಚರಲ್ ಸೈನ್ಸಸ್ (UAHS), ಶಿವಮೊಗ್ಗ
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ಗಂಖ), ರಾಯಚೂರು

ಭವಿಷ್ಯದ ಅವಕಾಶಗಳು

ಸ್ಮಾರ್ಟ್ ಕೃಷಿ (Smart Agriculture), ನಿಖರ ಕೃಷಿ (Precision Farming), ಡ್ರೋನ್ ತಂತ್ರಜ್ಞಾನ, ಕೃತಕ ಬುದ್ಧಿಮತÉÛ (AI), ಜೈವಿಕ ಕೃಷಿ ಹಾಗೂ ಕೃಷಿ ಡೇಟಾ ವಿಶ್ಲೇಷಣೆ ಮುಂತಾದ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ ಎಂ.ಎಸ್ಸಿ. ಕೃಷಿ ಪದವೀಧರರಿಗೆ ಭಾರತ ಹಾಗೂ ವಿದೇಶಗಳಲ್ಲಿ ಉತ್ತಮ ಬೇಡಿಕೆ ಇದೆ.

## ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಜಿಲ್ಲಾಧಿಕಾರಿಗಳ ಕಚೇರಿಮುಂದೆ ಧರಣಿಗೆ ಸಜ್ಜು

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನಲ್ಲಿ ರೈತರು ಎದು–ರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಸಮರ್ಪಕ ಕ್ರಮ ಕೈಗೊಳ್ಳದಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕ ಅಧ್ಯಕ್ಷ ದುರ್ಗಾ ಪ್ರಸಾದ್ ಸಹಾಯಕ ಆಯುಕ್ತರ ಮೂಲಕ ಜಿಲ್ಲಾಧಿಕಾರಿ ಗಳಿಗೆ ಮನವಿ ಸಲ್ಲಿಸಿದರು.

ರಸಗೊಬ್ಬರ ವಿತರಣೆಯಲ್ಲಿ ಸಮಸ್ಯೆ ಉಂಟಾಗಿದ್ದು, ಈ ಬಗ್ಗೆ ಸಹಾಯಕ ಆಯುಕ್ತ–ರಿಗೆ ಮನವಿ ಸಲ್ಲಿಸಿದರು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಎಫ್‌ಐಡಿ ಲಿಂಕ್ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಇದರಲ್ಲಿ ತಾಂತ್ರಿಕ ಸಮಸ್ಯೆಯಿಂದಾಗಿ ರೈತರಿಗೆ ರಸಗೊಬ್ಬರ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ. ಇದರಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಾರಿ ಮುಂಗಾರು ಹಂಗಾಮು ಮಳೆ ಸಂಪೂರ್ಣವಾಗಿ ಕೈಕೊಟ್ಟಿದ್ದ–ರಿಂದ ಬಿತ್ತಿದ ಬೆಳೆ ಒಣಗಿ ಹೋಗುತ್ತಿದೆ. ಇದರಿಂದ ರೈತರು ನಷ್ಟ ಅನುಭವಿಸುವಂತಾಗಿದೆ. ಕೂಡಲೇ ತಾಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು ಹಾಗೂ ಕೂಡಲೇ ಪರಿಹಾರ ಧನ ಮಂಜೂರು ಮಾಡಿ ರೈತರಿಗೆ ಪರಿಹಾರ ನೀಡಬೇಕು. ಪ್ರಮುಖವಾಗಿ ಗ್ರಾಮೀಣ ಭಾಗದಲ್ಲಿ ರಸ್ತೆಗಳು ಹದಗೆಟ್ಟು ಹೋಗಿದ್ದು, ರಸ್ತೆಗಳ ದುರಸ್ತಿಗೆ ತಾಲೂಕು ಆಡಳಿತ ಮುಂದಾಗುತ್ತಿಲ್ಲ. ಬೆಳೆ ಹಾನಿಗೆ ಪರಿಹಾರ, ನೀರಾವರಿ ಸಮಸ್ಯೆ, ವಿದ್ಯುತ್ ಸರಬರಾಜಿನ ವ್ಯತ್ಯಯ, ಬೆಳೆ ವಿಮೆ, ಬೆಂಬಲ ಬೆಲೆ, ರಸಗೊಬ್ಬರ ಹಾಗೂ ಬೀಜಗಳ ಲಭ್ಯತೆ ಸೇ–ರಿದಂತೆ ಹಲವು ಸಮಸ್ಯೆಗಳ ಬಗ್ಗೆ ಅಧಿಕಾ–ರಿಗಳ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಹಾಗೂ ರೈತರ ನ್ಯಾಯಸಮ್ಮತ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲು ದಿನಾಂಕ: 10–08–2026 ರಂದು ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಶಾಂತಿಯುತ ಧರಣಿ ನಡೆಸುತ್ತೇವೆಂದರು..ಈ ಸಂದರ್ಭದಲ್ಲಿ ಬಸವರಾಜ ಅಂಗಡಿ , ಮಹ್ಮದ್ ಸಾಬ , ನಾಗಪ್ಪ ಪೋಣೆದ್ , ಹನುವಂತ , ಶರಣಬಸವ , ರಾಮಣ್ಣ ಅಡಿಕೇರ , ಹೋಳೆಪ್ಪ , ಮಲ್ಲೇಶ , ಶಿವರಾಜ , ಹನುಮಂತ ಹಳ್ಳಿ , ಕರಿಯಪ್ಪ , ಆದಪ್ಪ , ದುರಗಪ್ಪ , ನವೀನನಾಯಕ , ಭಾಷಾಸಾಬ , ರವಿಕುಮಾರ , ಹುಲಗಪ್ಪ , ಮೌನೇಶ , ರಮೇಶ ಗೌಡೂರು , ಮುದಿಯಪ್ಪ , ಲಕ್ಷಣ, ಸೋಮರೆಡ್ಡಿ , ಅಮರೇಶ ಭೂಪೂರು ,ಶರತ್ ಕುಮಾರ , ಅಮರಯ್ಯ ಗುಡದನಾಳ , ಸಾಬಣ್ಣ , ರಂಗಪ್ಪ, ಚನ್ನಬಸವ , ಭೀಮಪ್ಪ , ಭೀಮರಾಯ ಸೇರಿದಂತೆ ಇತರರು ಇದ್ದರು .



### ಪ್ರಮುಖ ಬೇಡಿಕೆಗಳು:

1. ರೈತರ ಸಮಸ್ಯೆಗಳಿಗೆ ಅಧಿಕಾರಿಗಳು ತಕ್ಷಣ ಸ್ಪಂದಿಸಿ ಶೀಘ್ರ ಪರಿಹಾರ ಕಲ್ಪಿಸಬೇಕು.
2. ತಾಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ತಕ್ಷಣ ಪರಿಹಾರ ಬಿಡುಗಡೆ ಮಾಡಬೇಕು.
3. ನಾರಾಯಣಪೂರ ಜಲಾಶಯ ಭರ್ತಿಯಾಗಿದ್ದು, ಆದಷ್ಟು ಬೇಗನೆ ಐಸಿಸಿ ಸಭೆ ಕರೆದು ಕಾಲುವೆಗಳಿಗೆ ನೀರು ಹರಿಸುವ ವ್ಯವಸ್ಥೆ ಮಾಡಬೇಕು.
4. ರಸಗೊಬ್ಬರಗಳನ್ನು ಸಮರ್ಪಕವಾಗಿ ವಿತರಣೆ ಮಾಡಬೇಕು
5. ರೈತ ವಿರೋಧಿ ಆಡಳಿತಾತ್ಮಕ ನಿರ್ಲಕ್ಷ್ಯವನ್ನು ತಕ್ಷಣ ಕೊನೆಗೊಳಿಸಬೇಕು ಎಂದು ಹೇಳಿದರು

## ಖಾಸ್ಗತ ಮಹಾಶಿವಯೋಗಿಗಳ ಜಾತ್ರೆ ಸಂಭ್ರಮ




❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ಆರಾಧ್ಯ ದೈವ ಶ್ರೀ ಖಾಸ್ಗತ ಮಹಾ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂತಿಮ ದಿನವಾದ ಸೋಮವಾರದಂದು ನಡೆದ ಗಂಗಸ್ಥಳ, ಶ್ರೀಗಳ ಬೆಳ್ಳಿ ಮೂರ್ತಿಗಳ ಆನೆ ಅಂಬಾರಿ ಭವ್ಯ ಮೆರವಣಿಗೆ ಹಾಗೂ ಸಂಜೆ ಜರುಗಿದ ಮಹಾ ರಥೋತ್ಸವ ಕಾರ್ಯಕ್ರಮಗಳು ಐತಿಹಾಸಿಕ ತಾಳಿಕೋಟಿ ಪಟ್ಟಣದ ಸರ್ವಧರ್ಮೀಯರ ಸಾಮರಸ್ಯಕ್ಕೆ ಮತ್ತೊಮ್ಮೆ ಸಾಕ್ಷಿಯಾದವು.

ಸೋಮವಾರ ಬೆಳಗ್ಗೆಯಿಂದಲೇ ಶ್ರೀಮಠದಲ್ಲಿ ವಿವಿಧ ಪೂಜೆಗಳ ವಿಶೇಷ ಕಾರ್ಯಕ್ರಮಗಳು ಧಾರ್ಮಿಕ ವಿಧಿ ವಿಧಾನಗಳಂತೆ ಭಕ್ತಿ ಭಾವದಿಂದ ನಡೆದವು. ಬೆಳಿಗ್ಗೆ 9:00 ಗಂಟೆಗೆ ಶ್ರೀ ಖಾಸ್ಗತೇಶ್ವರ ಮಠದಿಂದ ಆನೆ ಅಂಬಾರಿ ಮೇಲೆ ಲಿಂಗೈಕ್ಯ ಶ್ರೀ ಖಾಸ್ಗತರ ಬೆಳ್ಳಿ ಮೂರ್ತಿ ಮೆರವಣಿಗೆ, ವಿರಕ್ತ ಮಹಾಸ್ವಾಮಿಗಳ ಭಾವಚಿತ್ರದ ಭವ್ಯ ಮೆರವಣಿಗೆ ಇದರ ಜೊತೆಗೆ ಸಾರೋಟದಲ್ಲಿ ವಿರಾಜಮಾನರಾದ ಪರಮ ಪೂಜ್ಯ ಶ್ರೀ ಸಿದ್ದಲಿಂಗ ದೇವರ ಮಹಾ ಮೆರವಣಿಗೆ ಪಟ್ಟಣದ ಪ್ರಮುಖ ಬಡಾವಣೆಗಳ ಮೂಲಕ ಐತಿಹಾಸಿಕ ಭೀಮನ ಬಾವಿಗೆ ತಲುಪಿ ಅಲ್ಲಿ ಗಂಗಸ್ಥಳದ ಕಾರ್ಯಕ್ರಮಗಳು ನೆರವೇರಿಸಿ ಮತ್ತೆ ಮುಂದುವರೆದ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಹಾಯ್ದು ಶ್ರೀ ಮಠಕ್ಕೆ ತಲುಪಿತು. ಮೆರವಣಿಗೆಯಲ್ಲಿ ಭಾಗವಹಿಸಿದ ವಿವಿಧ ಕಲಾ ತಂಡಗಳು ಆನೆ ಅಂಬಾರಿ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ತಂದವು.

ಮೆರವಣಿಗೆಯಲ್ಲಿ ಭಾಗವಹಿಸಿದ ಸಾವಿರಾರು ಭಕ್ತರಿಗೆ ದಾರಿಉದ್ದಕ್ಕೂ ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆ ತಜ್ಞ ಡಾ.ಪ್ರಭುಗೌಡ ಲಿಂಗದಳ್ಳಿ ಅಭಿಮಾನಿ ಬಳಗ, ಎಬಿಡಿ ಫೌಂಡೇಶನ್ ಹಾಗೂ ಕುಚಕು ಗೆಳೆಯರ ಬಳಗ, ಬಸನಗೌಡ ಯಡಿಯಾಪುರ ಅಭಿಮಾನಿ ಬಳಗ, ಸಜ್ಜನ ಸಮಾಜದವರು, ರಾಜವಾಡೆ ಕಿಂಗ್ಸ್ ಗೆಳೆಯರ ಬಳಗ, ನಮ್ಮ ಗೆಳೆಯರ ಬಳಗ, ಗಜಾನನ ವೃತ್ತ ಮಂಡಳಿ, ಭಗತ್ ಸಿಂಗ್ ಗೆಳೆಯರ ಬಳಗ, ಸಹೃದಯ ಗೆಳೆಯರ ಬಳಗ ಒಳಗೊಂಡು ಅನೇಕ ಯುವಕ ಸಂಘದವರು ತರ ತರಹದ ವಿಶೇಷ ಪದಾಥ–ರ್ಗಗಳನ್ನು ಸಿದ್ಧಪಡಿಸಿ ಭಕ್ತರಿಗೆ ವಿತರಿಸಿದರು.

ಸಂಜೆ 6 ಗಂಟೆಗೆ ಶ್ರೀ ಖಾಸ್ಗತೇಶ್ವರ ಮಠದಿಂದ ಆರಂಭಗೊಂಡ ರಥ–ೋತ್ಸವ ಬಸವೇಶ್ವರ ದೇವಸ್ಥಾನದವರೆಗೆ ನಡೆದು ಮರಳಿ ಮಠಕ್ಕೆ ತಲುಪಿತು. ರಥ–ೋತ್ಸವದಲ್ಲಿ ತಾಳಿಕೋಟಿ ಪಟ್ಟಣ ಸೇರಿದಂತೆ ಮುಂಬೈ, ಸೋಲಾಪುರ, ಪುಣೆ, ಸಾಂಗ್ಲಿ, ಮಿರಜ್, ರಾಜಸ್ಥಾನ, ಬೆಂಗಳೂರು,ಗೋವಾ, ಹೈದರಾಬಾದ ಸೇರಿದಂತೆ ವಿವಿಧಡೆಯಿಂದ ಆಗಮಿಸಿದ್ದ ಸಾವಿರಾರು ಭಕ್ತರು ರಥದ ಮೇಲೆ ಉತ್ತತ್ತಿ ಹೂವುಗಳನ್ನು ಎಸೆದು ಭಕ್ತಿ ಭಾವವನ್ನು ಮೆರೆದರು. ಶ್ರೀ ಮಠದ ಪೀಠಾಧಿಪತಿ ಶ್ರೀ ಸಿದ್ದಲಿಂಗ ದೇವರು ಅವರ ಸಾನಿಧ್ಯದಲ್ಲಿ ಜರುಗಿದ ಜಾತ್ರೋತ್ಸವದ ಎಲ್ಲಾ ಕಾರ್ಯಕ್ರಮದ ಉಸ್ತುವಾರಿಯನ್ನು ವೇದಮೂರ್ತಿ ಮುರಗೇಶ ವಿರಕ್ತಮಠ ಅವರು ವಹಿಸಿಕೊಂಡಿದ್ದರು.

### ಸ್ವಾಸ್ಥ್ಯ ಮತ್ತು ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಮಾದಕ ವಸ್ತುಗಳ ಜಾಗೃತಿ ಅಗತ್ಯ : ಎಸ್ಪಿ ಡಾ. ಸುಮನ್ ಡಿ. ಪೆನ್ನೇಕರ್

## ಆಪರೇಷನ್ ರೈಸ್' ಮತ್ತು 'ಬೇಡ ಬ್ರೋ' ಅಭಿಯಾನ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ನಶ ಮುಕ್ತ ಕರ್ನಾಟಕವನ್ನಾಗಿ ರೂಪಿಸುವ ಮೂಲಕ ಸ್ವಾಸ್ಥ್ಯ ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ಮಾಡಬೇಕಾಗಿದೆ ಎಂದು ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್ ಹೇಳಿದರು.

ಪಟ್ಟಣದ ಕಮ್ಮವಾರಿ ಭವನದಲ್ಲಿ ಕಂಪ್ಲಿ ಠಾಣೆವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಆಪರೇಷನ್ ರೈಸ್ ಹಾಗೂ ಬೇಡ ಬ್ರೋ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಶ್ಪರಿಣಾಮ ಬಗೆಗಿನ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಆಪರೇಷನ್ ರೈಸ್ ಎಂಬುದು ಯುವಜನತೆಯನ್ನು ಮಾದಕ ಪದಾಥ–ರ್ಗಗಳ ಜಾಲದಿಂದ ರಕ್ಷಿಸಲು ಮತ್ತು ಮಾದಕ ವಸ್ತುಗಳ ಅಕ್ರಮ ಮಾರಾಟಕ್ಕೆ ಕಡಿವಾಣ ಹಾಕಲು ಕರ್ನಾಟಕ ಸರ್ಕಾರ ಮತ್ತು ರಾಜ್ಯ ಪೊಲೀಸ್ ಇಲಾಖೆ ಜಂಟಿಯಾಗಿ ರೂಪಿಸಿರುವ ಒಂದು ವಿಶೇಷ ಅಭಿಯಾನವಾಗಿದೆ. 2028ರ ವೇಳೆಗೆ ಕರ್ನಾಟಕವನ್ನು ಸಂಪೂರ್ಣವಾಗಿ ಮಾದಕ ಮುಕ್ತ ರಾಜ್ಯವನ್ನಾಗಿ ಮಾಡುವ ಗುರಿಯನ್ನು ಈ ಯೋಜನೆ ಹೊಂದಿದೆ. ಮಾದಕ ವ್ಯಸನದಿಂದ ದೂರ ಉಳಿಯುವ ಮೂಲಕ ಇಂದಿನ ಯುವಕರು ನಾಡಿನ ಉತ್ತಮ ಪ್ರಜೆಗಳಾಗಿ ಹೊರ ಹೊಮ್ಮಬೇಕು.




ಸ್ವಾಸ್ಥ್ಯ ಸಮಾಜಕ್ಕೆ ಕಂಟಕವಾಗಿರುವ ಮಾದಕ ವಸ್ತುಗಳ ಬಗ್ಗೆ ಅತಿ ಹೆಚ್ಚಿನ ಜಾಗೃತಿವಹಿಸುವ ಜೊತೆಗೆ ಬಾಲ್ಯ ವಿವಾಹ, ಬಾಲ್ಯ ಕಾರ್ಮಿಕ ಸೇರಿದಂತೆ ಇಂತಹ ಘಟನೆಗಳಿಗೆ ಸಂಪೂರ್ಣವಾಗಿ ಕಡಿವಾಣ ಹಾಕುವ ನಿಟ್ಟಿನಲ್ಲಿ ಪೋಷಕರ, ಯುವಜನತೆಯ ಮತ್ತು ಸ್ಥಳೀಯ ಮುಖಂಡರ ಸಹಕಾರ ಅಗತ್ಯವಾಗಿದೆ. ಇಂದಿನ ಆಧುನಿಕ ಯುಗದಲ್ಲಿ ಮಾದಕ ವಸ್ತುಗಳ ನಿರ್ಮೂಲನೆ ವಿದ್ಯಾರ್ಥಿಗಳಿಂದಲೂ ಸಾಧ್ಯ ಎಂದರು. ತೋರಣಗಲ್ಲು ಉಪ ವಿಭಾಗದ ಡಿವೈಎಸ್ಪಿ ಪ್ರಸಾದ್ ಗೋಖಲೆ, ಮಾತನಾಡಿ, ಮಾದಕ ದ್ರವ್ಯಗಳ ಬಳಕೆಯನ್ನು ಕಡ್ಡಾಯವಾಗಿ ತಿರಸ್ಕರಿಸುವುದು. ಡ್ರಗ್ಸ್ ಮಾರಾಟ ಅಥವಾ ಸಾಗಣೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವುದು. ವ್ಯಸನಕ್ಕೆ ಒಳಗಾದವ–ರಿಗೆ ಚಿಕಿತ್ಸೆ ಮತ್ತು ಕೌನ್ಸೆಲಿಂಗ್ ಮೂಲಕ ಸಹಾಯ ಮಾಡುವುದು. ಮಾದಕ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಸಮುದಾಯಗಳನ್ನು ಸಬಲಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಎಂಬದನ್ನ ತಿಳಿಸಿದರು. ಪಿಐ ಕೆ.ಬಿ.ವಾಸುಕುಮಾರ ಸ್ವಾಗತಿಸಿ, ದುಶ್ಚಟಗಳಿಂದ ದೂರ ಇರುವ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ನಂತರ ರಂಗಲೋಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆವತಯಿಂದ ಮಾದಕ ವ್ಯಸನಮುಕ್ತ ಭಾರತ ಅರಿವು ಜಾಗೃತಿ ಉತ್ತಮ ನಾಟಕವೂ ಎಂ.ಮಹಾತೇಶ್ ತಂಡದಿಂದ ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ ಡಾ.ರವೀಂದ್ರ ಕನಿಕೇರಿ, ಶಿಕ್ಷಣ ಇಲಾಖೆಯ ಇಸಿಓ ಟಿ.ಎಂ.ಬಸವರಾಜ, ಕಾಲೇಜು ಪ್ರಾಚಾರ್ಯ ಸಿದ್ದೇಶ ಪರಮೇಶ, ವಿವೇಕಾನಂದ ಸಂಸ್ಥೆಯ ಮುಖ್ಯಗುರು ಬಡಿಗೇರ್ ಜಿಲಾನಸಾಬ್ ಕಾರ್ಯಕ್ರಮ ನಿರೂಪಿಸಿದರು. ಶಾಲಾ–ಕಾಲೇಜಿನ ಉಪನ್ಯಾಸಕರು ಸೇ–ರಿದಂತೆವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಶಾಂತಿಯುತ ಪ್ರತಿಭಟನೆ ನಡೆಸಲು ಏಕರೂಪ ಮಾರ್ಗಸೂಚಿ ಅಗತ್ಯ

❑ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ಸಾಂವಿಧಾನಿಕವಾಗಿ ಖಾತರಿಪಡಿಸಲಾಗಿದೆ ಮತ್ತು ಪ್ರತಿಭಟನಾಕಾರರ ಮೇಲೆ ಪೊಲೀಸರು ಅಧಿಕ ಬಲಪ್ರಯೋಗ ಮಾಡಿದ್ದನ್ನು ಸಮರ್ಥಿಸಲು ಸಾಧ್ಯವಿಲ್ಲ. ದೇಶಾದ್ಯಂತ ಶಾಂತಿಯುತ ಪ್ರತಿಭಟನೆ ನಡೆಸಲು ಏಕರೂಪದ ಮಾರ್ಗಸೂಚಿ ಅಥವಾ ಶಿಷ್ಟಾಚಾರ ರೂಪಿಸುವುದು ಅಗತ್ಯವಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ನಾಗರಿಕರಿಗೆ ಶಾಂತಿಯುತವಾಗಿ ಪ್ರತಿಭಟಿಸಲು ಎಲ್ಲ ಹಕ್ಕಿದೆ, ಆದರೆ ಅಂತಹ ಸಭೆಗಳಿಗೆ ಅಡ್ಡಿಪಡಿಸಲು ಪ್ರಯತ್ನಿಸುವ ಸಮಾಜ ವಿರೋಧಿ ಶಕ್ತಿಗಳನ್ನು ಎದು–ರಿಸಲು ಅಧಿಕಾರಿಗಳು ಸ್ಪಷ್ಟ ಚೌಕಟ್ಟು ರೂಪಿಸಬೇಕಾಗಿದೆ ಎಂದು ತಿಳಿಸಿದ್ದು ಎಲ್ಲಾ ವಾದಗಳನ್ನು ಆಲಿಸಿದ ನಂತರ, ಸುಪ್ರೀಂ ಕೋರ್ಟ್ ಅರ್ಜಿಗಳ ಗುಂಪನ್ನು ನಾಳೆ ಮುಂದಿನ ವಿಚಾರಣೆಗೆ ಪಟ್ಟಿ ಮಾಡುವಂತೆ ನಿರ್ದೇಶಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿ ಮೋಹನ ಅವರನ್ನೊಳಗೊಂಡ ಪೀಠ, ಈ ವಿಷಯ ತಿಳಿಸಿದ್ದು ಈ ವಿಷಯ ರಾಷ್ಟ್ರೀಯ ಮಟ್ಟದಲ್ಲಿ ಪರಿಗಣನೆಗೆ ಅರ್ಹವಾಗಿದೆ ಎಂದು ಹೇಳಿದೆ.

ನೀಟ್–ಯುಜಿ ಪತ್ರಿಕೆ ಸೋರಿಕೆ ಮತ್ತು ಶಿಕ್ಷಣ ಮತ್ತು ಪರೀಕ್ಷಾ ವ್ಯವಸ್ಥೆಯಲ್ಲಿನ ಇತರ ಅಕ್ರಮಗಳ ಕುರಿತು ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ವಿರುದ್ಧ ಪೊಲೀಸ್ ಅಧಿಕಪ್ರಯೋಗಗಳನ್ನು ಆರೋಪಿಸುವ ಅರ್ಜಿಗಳ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಶಾಂತಿಯುತ ಪ್ರತಿಭಟನೆಗಳನ್ನು ನಿಯಂತ್ರಿಸುವ ಪ್ರಮಾಣಿತ ಶಿಷ್ಟಾಚಾರ, ನಾಗರಿಕರ ಹಕ್ಕುಗಳನ್ನು ಕಾನೂನು ಮತ್ತು ಸುವ್ಯವಸ್ಥೆಯ ಕಾಳಜಿಗಳೊಂದಿಗೆ ಸಮತೋಲನಗೊಳಿಸಲು ಸಹಾಯ ಮಾಡುತ್ತದೆ ಈ ನಿಟ್ಟಿನಲ್ಲಿ ಸರ್ಕಾರಗಳು ಯೋಚಿಸುವ ಅಗತ್ಯವಿದೆ ಎಂದು ನ್ಯಾಯಪೀಠ ತಿಳಿಸಿದೆ



ಮುಖ್ಯನ್ಯಾಯಮೂರ್ತಿ ಸೂರ್ಯಕಾಂತ್ ಪ್ರತಿಕ್ರಿಯಿಸಿ "ಯಾರಾದರೂ ಶಾಂತಿಯುತವಾಗಿ ಆಂದೋಲನ ಮಾಡಲು ಬಯಸಿದಾಗ ಶಿಷ್ಟಾಚಾರ ಇರಬೇಕು. ಅದಕ್ಕೆ ಸರಿಯಾದ ಸ್ಥಳ ಜೊತೆಗೆ ಯಾವುದೇ ಅಡಚಣೆ ಮಾಡಬಾರದು. ಆದರೆ ಅದರಲ್ಲಿ ಯಾವುದೇ ಸಮಾಜವಿರೋಧಿ ಅಂಶವಿದ್ದರೆ, ಮಿತಿಮೀರಿದ ಬದ್ಧತೆಯಿದ್ದರೆ, ಅದನ್ನು ಸ್ವತಂತ್ರವಾಗಿ ಪರಿಶೀಲಿಸಬೇಕು. ದೆಹಲಿಯ ಪ್ರಕರಣ ಮಾತ್ರವಲ್ಲ. ಶಿಷ್ಟಾಚಾರದಲ್ಲಿ ಏಕರೂಪತೆ ಅಗತ್ಯವಿದೆ. ಕೇವಲ ಆಂದೋಲನ ಎಂದರೆ ಲಾಠಿ ಚಾರ್ಜ್ ಅಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಶಾಂತಿಯುತ ಪ್ರತಿಭಟನೆ ಆಯೋಜಿಸಲು ಮತ್ತು ನಿಯಂತ್ರಿಸಲು ದೇಶಾದ್ಯಂತ ಅನ್ವಯವಾಗುವ ಕಡ್ಡಾಯ ಮಾರ್ಗಸೂಚಿಗಳನ್ನು ಪರಿಚಯಿಸುವ ಸಾಧ್ಯತೆ ಪರಿಶೀಲಿಸುತ್ತಿರುವುದಾಗಿ ಪೀಠ ಹೇಳಿದೆ. ಪ್ರತಿಭಟನೆ ನಡೆಯುತ್ತವೆ ಎಂಬ ಕಾರಣ–ಕ್ಕೆ ಶಾಂತಿಯುತ ಪ್ರತಿಭಟನೆಗಳಿಗೆ ಲಭ್ಯವಿರುವ ಸಾಂವಿಧಾನಿಕ ರಕ್ಷಣೆ ದುರ್ಬಲಗೊಳಿಸಲಾಗುವುದಿಲ್ಲ. "ಶಾಂತಿಯುತ ಪ್ರತಿಭಟನೆಯ ಹಕ್ಕು ಸಂವಿಧಾನದಲ್ಲಿದೆ. ಶಾಂತಿಯುತ ಪ್ರತಿಭಟನೆ ಹಕ್ಕನ್ನು ಸಂಪೂರ್ಣವಾಗಿ ಖಾತರಿಪಡಿಸಲಾಗಿದೆ ಎಂದು ತಿಳಿಸಿದೆ.

ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಮೇಲೆ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದ ವಿದ್ಯಾರ್ಥಿಗಳ ವಿರುದ್ಧ ಪೊಲೀಸರು ಲಾಠಿ ಚಾರ್ಜ್ ಮತ್ತು ಅಶ್ರುವಾಯು ಸೇರಿದಂತೆ ಅತಿಯಾದ ಬಲಪ್ರಯೋಗ ಮಾಡಿದ್ದಾರೆ ಎಂಬ ಆರೋಪಗಳಿಗೆ ನ್ಯಾಯಾಲಯ ಈ ಅಭಿಪ್ರಾಯ ಹೊರಹಾಕಿದೆ. ಹಿರಿಯ ವಕೀಲರಾದ ಗೋಪಾಲ್ ಶಂಕರನಾರಾಯಣನ್, ಕಾಲಿನ್ ಗೊನ್ಸಾಲ್ವೆಸ್ ಮತ್ತು ವಿಕಾಸ್ ಸಿಂಗ್ ವಿವಿಧ ಅರ್ಜಿದಾರರ ಪರವಾಗಿ ಹಾಜರಾಗಿ, ವಿದ್ಯಾರ್ಥಿ ಪ್ರತಿಭಟನಾಕಾರರ ವಿರುದ್ಧ ಬಲಪ್ರಯೋಗದ ಆರೋಪ ಹೊತ್ತಿರುವ ಪೊಲೀಸ್ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101